ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜನವರಿ 2017 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 4
ಪುಟ : 12
ಬೆಲೆ : ₹ 10/-

## 68ನೇ ಗಣರಾಜ್ಯೋತ್ಸವದ ಶುಭಾಶಯಗಳು








ರಾಜ್ಯ ಸರ್ಕಾರ ಶಿಕ್ಷಣ ತಜ್ಞರು, ಶಿಕ್ಷಕರ ಜೊತೆ ಚರ್ಚೆ ಇಲ್ಲದೆ ಪಠ್ಯಕ್ರಮಗಳನ್ನು ಬದಲಾಯಿಸುವ ತೀರ್ಮಾನವನ್ನು ವಿರೋಧಿಸಿ ಜ. 3 ರಂದು ರಾಜಭವನದಲ್ಲಿ ರಾಜ್ಯಪಾಲರಾದ ಶ್ರೀ ವಾಜುಭಾಯ್ ವಾಲಾ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿತು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಶಾಸಕರಾದ ಶ್ರೀ ರಾಮಚಂದ್ರ ಗೌಡ, ಶ್ರೀಮತಿ ತಾರಾ ಮತ್ತು ಶ್ರೀ ಅರುಣ್ ಶಹಾಪುರ್ ಅವರ ನೇತೃತ್ವದ ನಿಯೋಗದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಅಧ್ಯಕ್ಷರಾದ ಶಿವಾನಂದ ಸಿಂಧನಕೇರಾ,ರಾಜ್ಯ ಪ್ರಧಾನ ಕಾರ್ಯದರ್ಶಿ ಚಿದಾನಂದ ಪಾಟೀಲ, ಪಿ ಆರ್ ಬಸವರಾಜ , ರಾಜ್ಯ ಉಪಾಧ್ಯಕ್ಷರಾದ ಬಿ.ಹೆಚ್. ವರದರಾಜ, ಶ್ರೀಮತಿ ಡಿ.ಕೆ.ಮಮತಾ, ಉಪಸ್ಥಿತರಿದ್ದರು.

A Journal of Karnataka State Secondary Teachers' Association

# ಸಂಪಾದಕೀಯ

'ಬಂಗಾಳ' ನಮ್ಮ ದೇಶಕ್ಕೆ ಹಲವಾರು 'ಅಮೂಲ್ಯರತ್ನಗಳನ್ನು ಕಾಣಿಕೆಯಾಗಿ ನೀಡಿದ ಪ್ರಾಂತ್ಯ. ರವೀಂದ್ರನಾಥ ಠಾಕೂರರು, ಸ್ವಾಮಿ ವಿವೇಕಾನಂದರು, ಸುಭಾಷ್‌ಚಂದ್ರಬೋಸ್, ರಾಮಕೃಷ್ಣಪರಮಹಂಸರು... ಹೀಗೆ ಒಬ್ಬರೇ, ಇಬ್ಬರೇ. ಸ್ವಾಮಿ ವಿವೇಕಾನಂದರಂತೂ 'ವಿಶ್ವವಿಜೇತ', 'ವಿಶ್ವಮಾನವ, 'ವೀರಸನ್ಯಾಸಿ'ಯಾಗಿ ಭಾರತದ ಕೀರ್ತಿಪತಾಕೆಯನ್ನು ಜಗತ್ತಿನ ಎಲ್ಲೆಡೆ ಹಾರಿಸಿದವರು. ಅವರು ಜೀವಿಸಿದ್ದು ಕೇವಲ 39 ವರ್ಷಗಳು ; ಸಾಧಿಸಿದ್ದು ಸಾವಿರಾರು ವರ್ಷಗಳು ಜನಮನದಲ್ಲಿ ಉಳಿಯುವ ಸಾಧನೆ. ಹುಡುಗರು, ಯುವಕರು, ಹಿರಿಯರು ; ಪುರುಷರು, ಸ್ತ್ರೀಯರು ಎನ್ನದೆ ಎಲ್ಲರ ಮನಸ್ಸಿನಲ್ಲೂ ಅಚ್ಚೊತ್ತಿದ ಪ್ರಭಾವವನ್ನು ಬೀರಿದವರು. ವಿವೇಕಾನಂದರು ಅಂದು-ಇಂದು-ಮುಂದೂ ಜನಮನದಲ್ಲಿ ಸಂಪೂರ್ಣ ಆದರ್ಶ ಪುರುಷರಾಗಿ ನಿಲ್ಲುವರು. ವಿವೇಕಾನಂದರಿಗೆ ಯುವಶಕ್ತಿಯಲ್ಲಿ ಅಪಾರ ವಿಶ್ವಾಸ. ಆದ್ದರಿಂದಲೇ ಭಾರತ ಸ್ವಾಮೀಜಿಯವರ ಜನ್ಮದಿನವಾದ ಜನವರಿ 12ನ್ನು 'ರಾಷ್ಟ್ರೀಯ ಯುವದಿನ'ವನ್ನಾಗಿ ಆಚರಿಸುತ್ತದೆ. ನಮ್ಮ ಯುವಜನತೆ ಈ ಸದವಕಾಶವನ್ನು ಬಳಸಿಕೊಂಡು ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಂಡು ನಮ್ಮ ರಾಷ್ಟ್ರದ ಅಭ್ಯುದಯಕ್ಕೆ ಶ್ರಮಿಸುವ ಸಂಕಲ್ಪ ಮಾಡುವರೆಂದು ಆಶಿಸೋಣ.

ಬಂಗಾಳದ ಮತ್ತೊಬ್ಬ 'ರೋಲ್‌ಮಾಡೆಲ್' ಸುಭಾಷ್‌ಚಂದ್ರಬೋಸರು. ಸುಭಾಷರು ಯುವಜನಾಂಗಕ್ಕೆ ಎಲ್ಲ ಕಾಲಕ್ಕೂ ಆದರ್ಶಪ್ರಾಯರು. ಬೋಸರ ಹೆಸರು ಕೇಳಿದರೇ ಭಾರತೀಯರಿಗೆ ರೋಮಾಂಚನವಾಗುತ್ತದೆ. ಸುಭಾಷರು ದೇಶಪ್ರೇಮದ, ಆತ್ಮವಿಶ್ವಾಸದ ಸಾಕಾರ ರೂಪ. "ನನಗೆ ರಕ್ತಕೊಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ಕೊಡುತ್ತೇನೆ" - ಈ ಕ್ರಾಂತಿಕಾರಕ ಮಾತಿನಿಂದ ಜನರಲ್ಲಿ ದೇಶಪ್ರೇಮದ ಕಿಚ್ಚನ್ನು ಹತ್ತಿಸಿದವರು ಸುಭಾಷರು. ಅಪಾರ ದೇಶಪ್ರೇಮ ಹಾಗೂ ತಮ್ಮದೇ ವಿಶಿಷ್ಟ ವಿಚಾರಧಾರೆ, ಕಾರ್ಯಚಟುವಟಿಕೆಗಳ ಮೂಲಕ ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಸುಭಾಷ್‌ಚಂದ್ರರ ಜನ್ಮದಿನ ಜನವರಿ 23. ಬೋಸರ ಜನ್ಮದಿನದಂದು ಅವರ ವಿಚಾರಧಾರೆಗಳನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವೇ ಸರಿ.

"ಕನ್ನಡದ ಕಣ್ವ"ರೆಂದು ಪ್ರಖ್ಯಾತರಾದ ಬಿ. ಎಂ. ಶ್ರೀಕಂಠಯ್ಯನವರು 'ಇಂಗ್ಲೀಷ್ ಗೀತಗಳು' ಕವನಸಂಕಲನದ ಮೂಲಕ ಕನ್ನಡ ಸಾಹಿತ್ಯ ಲೋಕದ ಕಣ್ಮಣಿ. ಇಂಗ್ಲೀಷ್ ಪ್ರಾಧ್ಯಾಪಕರಾದರೂ ಅವರ ಕನ್ನಡಾಭಿಮಾನ ಎಲ್ಲರಿಗೂ ಆದರ್ಶ. ಕನ್ನಡದಲ್ಲಿ ಅದ್ವಿತೀಯ ಕೃತಿಗಳನ್ನು ರಚಿಸಿದ ಬಿ.ಎಂ. ಶ್ರೀಯವರು ಜನಿಸಿದ್ದು 1884ರ ಜನವರಿ 3ರಂದು. ಕೆ.ಎಸ್. ನರಸಿಂಹಸ್ವಾಮಿಯವರು 'ಮೈಸೂರ ಮಲ್ಲಿಗೆ'ಯ ಕವಿ. ಪ್ರೇಮಕವಿಯೆಂದೇ ಪ್ರಸಿದ್ಧರಾದ ಕೆ.ಎಸ್.ನ ಜನಮನದ ಕವಿ. ಕೆ.ಎಸ್. ನರಸಿಂಹಸ್ವಾಮಿಯವರ ಜನನ 1915ರ ಜನವರಿ 26ರಂದು. ಅಂತೆಯೇ ಕಾದಂಬರಿಕಾರರಾಗಿ ಸಾಹಿತ್ಯಲೋಕದಲ್ಲಿ ಬೆಳಗಿದವರು ಗಳಗನಾಥರು. ಇವರು ಜನಿಸಿದ್ದು 1869ರ ಜನವರಿ 5 ರಂದು. ಮತ್ತೊಬ್ಬ ಪ್ರಖ್ಯಾತ ಕಾದಂಬರಿಕಾರರು ಚದುರಂಗರು. ಸುಬ್ರಹ್ಮಣ್ಯರಾಜು (ಚದುರಂಗ)ರ ಜನನ 1916 ಜನವರಿ 1 ನೇ ತಾರೀಖು. ವ್ಯಾಕರಣತೀರ್ಥರೆಂದೇ ಖ್ಯಾತರಾದ ಚಂದ್ರಶೇಖರ ಶಾಸ್ತ್ರಿಗಳು, ಭಾಷಾಶಾಸ್ತ್ರಜ್ಞರಾದ ಶಂ.ಬಾ.ಜೋಷಿ, ಆರ್.ಸಿ. ಹಿರೇಮಠ, ನಾ.ಕಸ್ತೂರಿ, ಶಾಂತಕವಿ, ಸು.ರಂ. ಎಕ್ಕುಂಡಿ - ಈ ಎಲ್ಲಾ ಪ್ರಖ್ಯಾತ ಸಾಹಿತಿಗಳ ಜನನ ಜನವರಿ ತಿಂಗಳಿನಲ್ಲಿ. ಜನ್ಮದಿನದ ಸಂದರ್ಭದಲ್ಲಿ ಈ ಎಲ್ಲಾ ಸಾಹಿತಿಗಳ, ಕೃತಿಗಳ ಪರಿಚಯ ಮಾಡಿಕೊಳ್ಳುವ ಪ್ರಯತ್ನ ಮಾಡೋಣ.

ಅಂತೆಯೇ ನಗೆ ಸಾಹಿತ್ಯದ ದಿಗ್ಗಜ ರಾಶಿ (ಡಾ. ಎಂ. ಶಿವರಾಂ), ಮುಳಿಯ ತಿಮ್ಮಪ್ಪಯ್ಯ, ಖ್ಯಾತ ವಿದ್ವಾಂಸರು, ಕಾದಂಬರಿಕಾರರಾದ ಕೆರೂರ ವಾಸುದೇವಾಚಾರ್ಯರು, ಬಿ. ಪುಟ್ಟಸ್ವಾಮಯ್ಯ, 20ನೇ ಶತಮಾನದ ನವ್ಯ ಸಾಹಿತಿ, ಪತ್ರಕರ್ತ ಪಿ. ಲಂಕೇಶ್ ಇವರುಗಳು ನಿಧನರಾದುದು ಜನವರಿ ತಿಂಗಳಲ್ಲೇ. ಈ ಎಲ್ಲಾ ಸಾಹಿತ್ಯಸಾಧಕರಿಗೆ ನಮ್ಮ ನಮನಗಳು. ಸಾಹಿತ್ಯ ಹಾಗೂ ಸಂಗೀತ ಲೋಕದ ದಿಗ್ಗಜರು ತ್ಯಾಗರಾಜರು ಹಾಗೂ ಪುರಂದರದಾಸರು. ಈ ಇಬ್ಬರು ಮಹನೀಯರ ಆರಾಧನೆಯು ಕ್ರಮವಾಗಿ ಜನವರಿ17 ಮತ್ತು 27ರಂದು. ಇವರ ಕೀರ್ತನೆಗಳನ್ನು ಸಂಗೀತ ಸುಧೆಯ ಮೂಲಕ ಆಸ್ವಾದಿಸಿ ಜೀವನವನ್ನು ಸಾರ್ಥಕ ಪಡಿಸಿಕೊಳ್ಳಬಹುದಲ್ಲವೇ?

ಸಂಪಾದಕರು

## ಸೂಕ್ತಿ



ಪರಿಪರಿವಾದಃ ಪರಿಷದಿ ನ
ಕಥಂಚಿತ್ ಪಂಡಿತೇನ ವಕ್ತವ್ಯಃ ।
ಸತ್ಯಮಪಿ ತನ್ನವಾಚ್ಯಂ
ಯದುಕ್ತಮಸುಖಾವಹಂ ಭವತಿ ॥

ವಿದ್ವಜ್ಜನರ ಸಭಾದಲ್ಲಿ ವಿದ್ವಾಂಸನಾದವನು ಪರರ ನಿಂದೆಯನ್ನು, ಅವಹೇಳನವನ್ನು ಮಾಡಬಾರದು. ಯಾವ ವಿಷಯದ ಬಗ್ಗೆ ಹೇಳಿದರೆ ಅದರಿಂದ ಇನ್ನೊಬ್ಬನಿಗೆ ಬೇಸರ ಉಂಟಾಗುತ್ತದೋ ಅಂಥದನ್ನು ನಿಜವಾಗಿದ್ದರೂ ಹೇಳಬಾರದು. ಸಭಾಮರ್ಯಾದೆಯನ್ನು ಕಾಪಾಡುವುದು ಅತೀ ಅವಶ್ಯವೆನಿಸಿದೆ.

- ಪಂಚತಂತ್ರ

## ಪರಿವಿಡಿ


- ಸ್ವತಂತ್ರ ಸಂಗ್ರಾಮದ ಮಹಾನಾಯಕ - ಸುಭಾಸ್ ಚಂದ್ರ ಬೋಸ್ 3
- ಪರಿವಾರದ ಕೇಂದ್ರಬಿಂದು 'ಸ್ತ್ರೀ' 4
- ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ 5
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ - ಒಂದು ಅವಲೋಕನ 6
- ಹಿಂದೂ ಆಧ್ಯಾತ್ಮಿಕ, ಸೇವಾ ಜಾತ್ರೆ 7
- ಸುತ್ತೋಲೆ 8
- ಆದರ್ಶ ಶಿಕ್ಷಕರು-ವೆಂಕಣ್ಣಯ್ಯ 10
- ಸ್ವಾಮಿ ವಿವೇಕಾನಂದರ ನುಡಿಗಳ ಪ್ರಸ್ತುತತೆ 11
- ಚಿತ್ರ ಸುದ್ದಿ 12

# ಸ್ವತಂತ್ರ ಸಂಗ್ರಾಮದ ಮಹಾನಾಯಕ ಸುಭಾಷ್‌ಚಂದ್ರ ಬೋಸ್



ಭೀಮಸೇನ್ ಪುರೋಹಿತ್
B.E. MTech
ಇಂಜಿನಿಯರ್
ಬೆಂಗಳೂರು



"ಸುಭಾಸ್ ಚಂದ್ರ ಬೋಸ್" –– ಈ ಹೆಸರಲ್ಲೇ ಒಂದು ಉದ್ಬೋಧಕ ಶಕ್ತಿಯಿದೆ. ಕೆಚ್ಚಿದೆ. ಮೈ ನವಿರೇಳಿಸುವ ರೋಚಕ ಇತಿಹಾಸವಿದೆ. ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ಒಬ್ಬ ವ್ಯಕ್ತಿ ಏನೆಲ್ಲಾ ಸಾಹಸಗಳನ್ನು ಮಾಡಬಹುದು ಎಂಬುದಕ್ಕೆ ಉದಾಹರಣೆಯಾಗಿ ಬೋಸರು ನಿಲ್ಲುತ್ತಾರೆ.

ಹುಟ್ಟಿದ್ದು ಜನವರಿ 23, 1897. ಒರಿಸಾದ ಕಟಕ್ ಊರಿನಲ್ಲಿ. 14 ಜನ ಮಕ್ಕಳಲ್ಲಿ ಒಂಬತ್ತನೆಯವನು. ಭಾರೀ ಬುದ್ಧಿವಂತ ಬಾಲಕ. ಶಾಲೆಯಲ್ಲಿ ಯಾವಾಗಲೂ ಮೊದಲ ಸ್ಥಾನ. ಜೊತೆಗೆ ಸ್ವಾಮೀ ವಿವೇಕಾನಂದರ ಪ್ರಭಾವದಿಂದ ದೇಶಪ್ರೇಮವನ್ನು ಕಣಕಣದಲ್ಲೂ ತುಂಬಿಸಿಕೊಂಡಿದ್ದ. ಬಂಗಾಳದ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಓದುವ ಸಮಯದಲ್ಲಿ ಒಮ್ಮೆ, ಕಾಲೇಜಿನ ಉಪನ್ಯಾಸಕ ಈ.ಎಫ್.ಒತ್ತೆನ್ ಭಾರತೀಯರನ್ನು ಅವಮಾನಿಸಿದ ಎಂಬ ಕಾರಣಕ್ಕೆ, ಆ ಬ್ರಿಟಿಷ್ ಪ್ರೊಫೆಸರ್ ನನ್ನೇ ಹಿಗ್ಗಾ ಮುಗ್ಗಾ ಥಳಿಸಿದ್ದ ಆ ಯುವಕ. ಅಂದಿನಿಂದಲೇ, "ಕ್ರಾಂತಿಕಾರಿ"ಯ ಪಟ್ಟ ಬೋಸರಿಗೆ ತಗುಲಿತು.

ಬೋಸರ ತಂದೆ ಜಾನಕೀನಾಥ್ ಬೋಸರಿಗೆ, ಮಗ "ಸಿವಿಲ್ ಸರ್ವೆಂಟ್" ಆಗಬೇಕೆಂಬ ಹಂಬಲ. ಹೀಗಾಗಿ ಹೆಚ್ಚಿನ ವ್ಯಾಸಂಗಕ್ಕೆ ಯುರೋಪಿಗೆ ಕಳಿಸಲಾಯಿತು. ಬೋಸರು ಅಲ್ಲೂ ಹಿಂದುಳಿಯಲಿಲ್ಲ. ಕಠಿಣವಾದ ಆ ಪರೀಕ್ಷೆಯಲ್ಲೂ ನಾಲ್ಕನೆಯ ರಾಂಕ್ ಪಡೆದು ಉತ್ತೀರ್ಣರಾದರು. ಆದರೆ, ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯುವ ತವಕ ಹೆಚ್ಚಾಗಿ, ಅವೆಲ್ಲವನ್ನೂ ಬಿಟ್ಟು ನೇರ ಭಾರತಕ್ಕೆ ಬಂದರು. ಭಾರತಕ್ಕೆ ಮರಳಿದ ಮೇಲೆ, ಮಹಾತ್ಮಾ ಗಾಂಧಿಯವರ ಪ್ರಭಾವದಿಂದ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸನ್ನು ಸೇರಿದರು. ದೇಶಬಂಧು ಚಿತ್ತರಂಜನ್ ದಾಸರ ಶಿಷ್ಯರಾಗಿ ತಮ್ಮ ಬುದ್ಧಿವಂತಿಕೆಯಿಂದ ಎಲ್ಲರ ಗಮನ ಸೆಳೆದಿದ್ದರು. ಕಾಲಾನಂತರದಲ್ಲಿ, ಗಾಂಧಿ–ಇರ್ವಿನ್ ನಡುವೆ ಒಪ್ಪಂದವಾದಾಗ, ಅದರಲ್ಲಿದ್ದ ಕೆಲವು ಅಸಂಬದ್ಧಗಳನ್ನು ಮನಗಂಡು, ಗಾಂಧೀಜಿಯನ್ನು ವಿರೋಧಿಸಿ ಕಾಂಗ್ರೆಸ್ಸಿನಿಂದ ಹೊರಬಂದರು.

ಕ್ರಾಂತಿಕಾರಕ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಬೋಸರು ಮುಂದೆ ನಡೆದ ದಾರಿ, ಸಿಂಹನಡಿಗೆಯೇ ಸರಿ. ದ್ವಿತೀಯ ವಿಶ್ವಯುದ್ಧ ನಡೆದ ಕಾಲಘಟ್ಟ. ಒಂದು ವೇದಿಕೆಯಲ್ಲಿ ಸಿಕ್ಕ ಸಾವರ್ಕರರು, "ಬೋಸರೇ, ಅಲ್ಲಿ ಜರ್ಮನಿ ಮತ್ತು ಇಂಗ್ಲೆಂಡ್ ಗಳು ವಿರುದ್ಧವಾಗಿ ಯುದ್ಧ ಮಾಡುತ್ತಿವೆ. ಬರಿ ಇಲ್ಲಿ ಧರಣಿ, ಚಳುವಳಿಗಳನ್ನು ಮಾಡಿ ಉಪಯೋಗವಿಲ್ಲ." ಎಂದು ಹೇಳಿದಾಗ, ಥಟ್ಟನೆ ಅವರ ಮಾತಿನ ಮರ್ಮ ಅರ್ಥವಾಗಿ ಹೋಯಿತು. ಕೆಲವೇ ದಿನಗಳಲ್ಲಿ ತಲೆಮರೆಸಿಕೊಂಡ ಬೋಸರು, ಸೀದಾ ಸಿಂಗಾಪುರದಿಂದ ರೇಡಿಯೋ ನಲ್ಲಿ ಭಾರತೀಯರನ್ನುದ್ದೇಶಿಸಿ ತಮ್ಮ ನಿಲುವನ್ನು ತಿಳಿಸಿದರು.

"ಶತ್ರುವಿನ ಶತ್ರು ಮಿತ್ರ" ಎಂಬ ಗಾದೆಯಂತೆ, ಬ್ರಿಟಿಷರ ವಿರೋಧಿಯಾದ ಜರ್ಮನಿಯ ಹಿಟ್ಲರ್ ನನ್ನು ಭೇಟಿಯಾಗಿ, ಸೈನ್ಯ ಕಟ್ಟುವ ಬಗ್ಗೆ ಬೆಂಬಲ ಪಡೆದರು. ಜರ್ಮನಿ, ಜಪಾನ್ ಗಳಲ್ಲಿ ಸಂಚರಿಸಿ, ಭಾರತೀಯರನ್ನು ಒಗ್ಗೂಡಿಸಿ "ಇಂಡಿಯನ್ ನ್ಯಾಷನಲ್ ಆರ್ಮಿ" ಅಥವಾ "ಅಜಾದ್ ಹಿಂದ್ ಫೌಜ್" ಸೈನ್ಯವನ್ನು ಕಟ್ಟಿದರು. ಭಾರತದ ಒಳಗಿದ್ದು ಹೋರಾಡುತ್ತಿದ್ದ ಬಳಗ ಒಂದೆಡೆಯಾದರೆ, ಹೊರಗಿನಿಂದಲೂ ಬ್ರಿಟಿಷರಿಗೆ ಮರ್ಮಾಘಾತ ನೀಡುವ ಇಂತಹ ಅದ್ಭುತ ಉಪಾಯ ಹೊಳೆದಿದ್ದೇ ಸಾವರ್ಕರರ ಆ ಒಂದು ಮಾತಿನಿಂದ..!!

ಸುಮಾರು 40 ಸಾವಿರದಷ್ಟು ಬೃಹತ್ತಾದ ಬೋಸರ ಭಾರತೀಯ ಸೈನ್ಯ, ಮೊದಲು ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ವಶಪಡಿಸಿಕೊಂಡಿತು. ಮತ್ತು ಆ ದ್ವೀಪಗಳನ್ನು "ಶಹೀದ್", "ಸ್ವರಾಜ್" ಎಂದು ಮರುನಾಮಕರಣ ಮಾಡಲಾಯಿತು. ಆ ಎರಡೂ ಪ್ರದೇಶಗಳಲ್ಲಿ "INA" ಸರ್ಕಾರ

ಪುಟ 9 ಕ್ಕೆ ➤

# ಪರಿವಾರದ ಕೇಂದ್ರಬಿಂದು 'ಸ್ತ್ರೀ'

2016ರ ಡಿಸೆಂಬರ್ 17 ಮತ್ತು 18ರ ಶನಿವಾರ, ಭಾನುವಾರ ದಂದು ಗುಜರಾತ್ ರಾಜ್ಯದ ವಡೋದರದ ಸ್ವಾಮಿನಾರಾಯಣ ಮಂದಿರದಲ್ಲಿ ಅಖಿಲ ಭಾರತೀಯ ಮಹಿಳಾ ಕಾರ್ಯಕರ್ತೆಯರ ವರ್ಗ ನಡೆಯಿತು.

ಡಾ॥ ವಿಮಲ್ ಪ್ರಸಾದ್‌ಜೀಯವರು ಶೈಕ್ಷಿಕ ಮಹಾಸಂಘದ ಪರಿಚಯವನ್ನು ಸಭೆಗೆ ಮಾಡಿಸುತ್ತಾ ಪ್ರತಿ ವರ್ಷದ ಜನವರಿ 12 ರಿಂದ 23 ರವರೆಗಿನ ಯಾವುದಾದರೊಂದು ದಿನವನ್ನು ಆಯ್ಕೆ ಮಾಡಿಕೊಂಡು ಕರ್ತವ್ಯಬೋಧ ದಿನವನ್ನಾಗಿ ಆಚರಿಸುವ ರೀತಿ, ಗುರುಪೂರ್ಣಿಮ ದಿನದಂದು ಗುರುವಂದನೆ ಯನ್ನು ಆಚರಿಸುವ ಬಗ್ಗೆ ಮತ್ತು ವಿಶ್ವ ವಿಭಾಗದ ಶಿಕ್ಷಾ ಭೂಷಣ್ ಸನ್ಮಾನದ ಬಗ್ಗೆಯೂ ಸವಿಸ್ತಾರವಾಗಿ ತಿಳಿಸಿದರು.

ರಾಷ್ಟ್ರಸೇವಿಕಾ ಸಮಿತಿಯ ವಿಶ್ವವಿಭಾಗದ ಪ್ರಚಾರಕರಾದ ಭಾಗ್ಯಶ್ರೀ ಸಾಠೆಯವರು ಶಾಶ್ವತ ಜೀವನ ಮೌಲ್ಯವನ್ನು ಪ್ರಧಾನ ವಿಷಯವನ್ನಾಗಿಟ್ಟುಕೊಂಡು ಮಾತನಾಡುತ್ತಾ ತಾವು ವಿದೇಶದಲ್ಲಿ ಪ್ರಚಾರ ಕಾರ್ಯ ಮಾಡುವಾಗ ಆದ ಅನುಭವಗಳನ್ನು ತಿಳಿಸುತ್ತಾ "Tailor makes a man gentleman in foreign, but character makes a man gentleman in India" ಎಂದು ತಿಳಿಸಿದರು. ಗರುಡ ಪಕ್ಷಿಯ ಎರಡು ರೆಕ್ಕೆಗಳು ಬಲಿಷ್ಠವಾಗಿದ್ದರೆ ಮಾತ್ರ ಗರುಡ ಎಲ್ಲಾ ಸಮಸ್ಯೆಗಳನ್ನು ಮೀರಿ ಅತಿ ಎತ್ತರದಲ್ಲಿ ಹಾರಾಟ ಮಾಡಬಹುದು. ಹಾಗೆಯೇ ಕುಟುಂಬದಲ್ಲಿ ಪುರುಷ ಮತ್ತು ಸ್ತ್ರೀಯರಿಬ್ಬರು ಬಲಿಷ್ಠವಾಗಿದ್ದರೆ ಮಾತ್ರ ಪರಿವಾರ ಸಂತೃಪ್ತವಾಗಿರಬಹುದೆಂದು ತಿಳಿಸಿದರು.

ವ್ಯಷ್ಟಿ, ಸಮಷ್ಟಿ, ಸೃಷ್ಟಿ, ಪರಮೇಷ್ಟಿಯ ಬಗ್ಗೆ ಗಮನವಿದ್ದಾಗಲೇ ಶಾಶ್ವತ ಜೀವನ ಮೌಲ್ಯವನ್ನು ಉಳಿಸಿ ಬೆಳೆಸಲು ಸಾಧ್ಯವೆಂದು ಹೇಳಿದರು. ಪರಿವಾರವೆಂದರೆ ಸುರಕ್ಷತೆಯ ಆವರಣವಾಗಿರಬೇಕು, ಸ್ನೇಹ, ಆತ್ಮೀಯತೆಯ ಕವಚವಾಗಿರಬೇಕು. ಒಟ್ಟಾರೆ ಪರಿವಾರದಲ್ಲಿ ಗೋಕುಲದಂತಹ ವಾತಾವರಣವಿರುವುದು ಅವಶ್ಯಕವೆಂದು ಹೇಳಿದರು.

ಕಾರ್ಯಕ್ರಮದ ಮೊದಲನೇ ಅಧಿವೇಶನದ ವಿಷಯ "ಪರಿವಾರದ ಕೇಂದ್ರ ಬಿಂದು 'ಸ್ತ್ರೀ'" ಎನ್ನುವುದಾಗಿತ್ತು. ಅಧಿವೇಶನದ ಸಂಪನ್ಮೂಲ ವ್ಯಕ್ತಿಯಾದ ಕಲ್ಪನಾಪಾಂಡೆಯವರು ಪರಿವಾರದಲ್ಲಿ ಪರಸ್ಪರ ಸಂವಾದ ಅಗತ್ಯವೆಂದು ತಿಳಿಸಿದರು. ಹೊಸ ಹಳೆಯ ತಲೆಮಾರುಗಳ ಮಧ್ಯೆ ಸಂಘರ್ಷ ಇರಬಾರದು. ಪರಿವಾರದ ಕೇಂದ್ರಬಿಂದುವಾಗಿ ಮಹಿಳೆ ಪರಿವಾರವನ್ನು ಸದೃಢ ಪಡಿಸಬೇಕೆಂದು ತಿಳಿಸಿದರು. ಈ ಅಧಿವೇಶನದ ಅಧ್ಯಕ್ಷತೆಯನ್ನು ಶ್ರೀಮತಿ ಡಾ॥ ರೇಖಾಭಟ್ ರವರು ವಹಿಸಿದ್ದರು. ಪರಿವಾರದ ಕೇಂದ್ರಬಿಂದುವಾದ ಮಹಿಳೆ ಪರಿವಾರದ ಕೆಲಸಗಳನ್ನು ಕರ್ತವ್ಯದೃಷ್ಟಿಯಿಂದಲೇ ಮಾಡುತ್ತಾಳೆ. ಅಲ್ಲಿ ಆಕೆಗೆ ಯಾವ ಪ್ರತಿಸ್ಪರ್ಧಿಯೂ ಇರುವುದಿಲ್ಲ. ಪರಿವಾರದ ಗತಿಶೀಲತೆಯನ್ನು ಮಹಿಳೆ ನೋಡುತ್ತಾಳೆ. ಅಂತೆಯೇ ಸಮಾಜದ ಗತಿಶೀಲತೆ ನಡೆಯುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ಎರಡನೇ ಅಧಿವೇಶನದ ವಿಷಯ "ಪರಿವಾರದ ಮೇಲೆ ಆಘಾತ ಮಾಡುವಂತಹ ವಿಷಯಗಳೇನು?" ಎಂಬುದಾಗಿದ್ದು, ವಿಷಯ ಪ್ರವರ್ತಕರಾಗಿ ಸುದೇಷ್ಣಾ ಶರ್ಮಾರವರು ಹಾಗೂ ಕಾರ್ಯಕ್ರಮದ ಸಂಚಾಲಕಿಯಾಗಿ ಶ್ರೀಮತಿ ಮಮತಾ ಡಿ.ಕೆ ಕಾರ್ಯ ನಿರ್ವಹಿಸಿದರು. ಪರಿವಾರದ ಮೇಲೆ ಆಘಾತವನ್ನುಂಟು ಮಾಡುವ ಕೆಲವು ಕಾರಣಗಳನ್ನು ಈ ರೀತಿ ಪಟ್ಟಿ ಮಾಡಲಾಯಿತು.

1. ವೃತ್ತಿನಿರತ ಮಹಿಳೆಯರು, 2. ಅಹಂ ಹೊಂದಿರುವ ಪುರುಷ ಮತ್ತು ಮಹಿಳೆಯರಿಂದ, 3. ವಿಭಕ್ತ ಕುಟುಂಬಗಳಿಂದ, 4. ಮಾಧ್ಯಮಗಳ ಕುಪ್ರಭಾವ, 5. ಪತಿ–ಪತ್ನಿಯರ ಪ್ರತಿಸ್ಪರ್ಧೆ 6. ಪಾಶ್ಚಾತ್ಯೀಕರಣ, 7. ಸಂವಾದ ವಿಹೀನ ಪರಿವಾರ 8. ಮಾನವೀಯ ಮೌಲ್ಯಗಳ ನ್ಯೂನತೆ. ಈ ನ್ಯೂನತೆಗಳ ನಿವಾರಣೆಗೆ ಮಾಡಬೇಕಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಮೇಶ್ವರಿ ಶರ್ಮಾರವರು ಪರಿವಾರಕ್ಕೆ ಆಘಾತ ನೀಡುವ ಅಂಶಗಳನ್ನು ದೂರಮಾಡುತ್ತಾ ಸಶಕ್ತ ಪರಿವಾರ ಕಟ್ಟಬೇಕೆಂದು ತಿಳಿಸಿದರು.

18.12.16ರ ಮೊದಲನೇ ಅಧಿವೇಶನದಲ್ಲಿ ಕಾರ್ಯಕಾರಿಣಿ ಸಭೆ ನಡೆಯಿತು. ನಂತರದ ಅಧಿವೇಶನದಲ್ಲಿ ಪರಿವಾರದ ಮೇಲಾಗುವ ಆಘಾತಗಳಿಗೆ ಶಾಸನಾತ್ಮಕವಾಗಿ ಏನೇನು ಸಮಾಧಾನ ನೀಡಬಹುದೆಂಬುದರ ಬಗ್ಗೆ ಚರ್ಚಿಸಲಾಯಿತು. ಭಾಗ್ಯಶ್ರೀಸಾಠೆಜೀರವರು ಪರಿವಾರದಲ್ಲಿರಬೇಕಾದ ಒಳ್ಳೆಯ ಮೌಲ್ಯಗಳೇನು? ಎಂಬುವುದನ್ನು ಪಿಪಿಟಿ ಮೂಲಕ ತೋರಿಸುತ್ತಾ ಸವಿಸ್ತಾರವಾಗಿ ವಿವರಿಸಿದರು.

ಸಮಾರೋಪ ಸಮಾರಂಭದಲ್ಲಿ ಪ್ರಿಯಂವಧಾಜೀಯವರು ಮಾತನಾಡುತ್ತಾ ಪರಿವಾರದ ಕೇಂದ್ರ ಬಿಂದು ಸ್ತ್ರೀ. ಒಂದು ಸರಿಯಾದ ಕೇಂದ್ರ ಬಳಸಿದರೆ ಮಾತ್ರ ಒಂದು ಸುಂದರವಾದ ವೃತ್ತ ರಚಿಸಲು ಸಾಧ್ಯ, ಹಾಗೆಯೇ ಸ್ತ್ರೀ ಸರಿಯಾದ ಕೇಂದ್ರ ಬಿಂದುವಾಗಿ ಪರಿವಾರವೆಂಬ ಸುಂದರವಾದ ವೃತ್ತವನ್ನು ರಚಿಸಿಕೊಳ್ಳಬೇಕೆಂದು ತಿಳಿಸಿದರು.

ಗುಜರಾತ್‌ನ ವಡೋದರದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ 8 ರಾಜ್ಯಗಳಿಂದ 70 ಕಾರ್ಯಕರ್ತೆಯರು ಭಾಗವಹಿಸಿದ್ದ ಅಭ್ಯಾಸವರ್ಗದಲ್ಲಿ ಅ.ಭಾ.ರಾ.ಶೈ.ಮಹಾಸಂಘದ ಹಿರಿಯ ಪೋಷಕರಾದ ಸಂಜೀವಿನಿ ರಾಯ್ಕರ್‌ರವರು ಮತ್ತು ಅ.ಭಾ.ರಾ.ಶೈ.ಮಹಾಸಂಘದ ಅಧ್ಯಕ್ಷರಾದ ಡಾ॥ ವಿಮಲ್ ಪ್ರಸಾದ್ ಅಗರ್‌ವಾಲ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಅ.ಭಾ.ರಾ.ಶೈ.ಮಹಾಸಂಘದ ಮಹಿಳಾ ವಿಭಾಗದ ರಾಷ್ಟ್ರೀಯ ಕಾರ್ಯದರ್ಶಿಯಾದ ಶ್ರೀಮತಿ ಸೀತಾಲಕ್ಷ್ಮಿಯವರು ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಕರ್ನಾಟಕದಿಂದ 9 ಮಹಿಳಾ ಕಾರ್ಯಕರ್ತೆಯರ ಭಾಗವಹಿಸುವಿಕೆ ಹೆಮ್ಮೆ ತರುವ ವಿಷಯವಾಗಿತ್ತು.

✍ **ಮಮತಾ ಡಿ.ಕೆ.,** ಮಹಿಳಾ ಪ್ರಮುಖ್

ದಾರಿ ದೀಪ

# ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ – 5

**ಭೀಮಸೇನ್ ಪುರೋಹಿತ್**
**B.E. MTech**
**ಇಂಜಿನಿಯರ್**
**ಬೆಂಗಳೂರು**



ಕೇವಲ ಭಾರತದಲ್ಲಷ್ಟೇ ಅಲ್ಲದೆ, ಇಡೀ ಪ್ರಪಂಚದಾದ್ಯಂತ ಪ್ರತಿಷ್ಠೆಯನ್ನು ಪಡೆದಿರುವ ವಿಜ್ಞಾನ ಸಂಸ್ಥೆಗಳಲ್ಲಿ ಬೆಂಗಳೂರಿನ "ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (IISC)" ಕೂಡ ಒಂದು. ಶತಮಾನದಷ್ಟು ಹಳೆಯದಾದ ಈ ಸಂಸ್ಥೆಯ ಹುಟ್ಟಿನ ಹಿಂದೆ ಕುತೂಹಲಕಾರಿ ಘಟನೆಯೂ ಇದೆ.

1893 ರಲ್ಲಿ, ಸ್ವಾಮೀ ವಿವೇಕಾನಂದರು ಜಪಾನಿನಿಂದ ಚಿಕಾಗೋಗೆ, ಹಡಗಿನಲ್ಲಿ ಪ್ರಯಾಣಿಸುವಾಗ ಆಕಸ್ಮಿಕವಾಗಿ ಜೆಮಶೇಡ್ ಜಿ ಟಾಟಾರ ಭೇಟಿಯಾಯಿತು. ಬಹುದಿನಗಳ ಬಳಿಕ, ವಿವೇಕಾನಂದರಿಗೆ ಪತ್ರವೊಂದನ್ನು ಬರೆದ ಟಾಟಾ, "ನಿಮ್ಮ ಜೊತೆ ಸಮಾಲೋಚನೆ ನಡೆಸಿದ ವಿಷಯಗಳು ಉತ್ಕೃಷ್ಟವಾಗಿದ್ದವು. ಭಾರತವು ಆಧ್ಯಾತ್ಮಿಕತೆಯ ಜೊತೆಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನೂ ಬೆಳೆಸಿಕೊಳ್ಳಬೇಕೆಂಬ ನಿಮ್ಮ ದೂರದೃಷ್ಟಿ, ಅತಿ ಉತ್ತಮವಾಗಿದೆ. ಈ ದಿಶೆಯಲ್ಲಿ ನೀವು ಮಾರ್ಗದರ್ಶನ ನೀಡಬೇಕು" ಎಂದು ನಿವೇದಿಸಿದ್ದರು.

ಇವೆಲ್ಲದರ ಒಟ್ಟು ಪರಿಣಾಮವಾಗಿ, ಟಾಟಾರವರು, ವಿಜ್ಞಾನ ಸಂಸ್ಥೆಯನ್ನು ಆರಂಭಿಸಲು ಒಂದು ಸಮಿತಿಯನ್ನು ರಚಿಸಿ, ಅನೇಕ ಸಮಾಲೋಚನೆಗಳನ್ನು ನಡೆಸಿ, 1898 ರಲ್ಲಿ ಲಾರ್ಡ್ ಕರ್ಜನ್‌ಗೆ ಸಂಸ್ಥೆಯ ನೀಲಿನಕ್ಷೆಯನ್ನು ತೋರಿಸಿದರು. ನೊಬೆಲ್ ವಿಜೇತ ಪ್ರೊಫೆಸರ್ 'ಸರ್.ವಿಲಿಯಮ್ ರಾಮ್ಸಯ್' ಈ ಸಂಸ್ಥೆ ತೆರೆಯಲು 'ಬೆಂಗಳೂರು' ಅತ್ಯಂತ ಪ್ರಶಸ್ತವಾದ ಜಾಗ ಎಂಬ ಸಲಹೆ ನೀಡಿದರು. ಅದರ ಅನುಸಾರವಾಗಿ ಮೈಸೂರಿನ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರರು 371 ಎಕರೆಗಳ ಜಾಗವನ್ನು ಸಂಸ್ಥೆಗಾಗಿ ನೀಡಿದರು.

ಸಂಸ್ಥೆಯನ್ನು ಪ್ರಾರಂಭಿಸುವ ಪರವಾನಗಿಯನ್ನು ವೈಸ್ರಾಯ್ ಲಾರ್ಡ್ ಮಿಂಟೋ 1909 ರಲ್ಲಿ ನೀಡಿದನು. 1911 ರಲ್ಲಿ ಮೈಸೂರಿನ ಮಹಾರಾಜರು ಕಟ್ಟಡದ ಶಂಕು ಸ್ಥಾಪನೆಯನ್ನು ಮಾಡಿದರು. ಕೆಲವು ದಿನಗಳ ನಂತರ, ಮೊತ್ತಮೊದಲ ವಿದ್ಯಾರ್ಥಿಗಳ ತಂಡ, "General and Applied Chemistry" ಮತ್ತು "Electro-Technology" ವಿಭಾಗಗಳಲ್ಲಿ ಪ್ರವೇಶ ಪಡೆಯಿತು. ರಾಮ್ಸಯ್ ಅವರ ಸಹವರ್ತಿ ಮಾರಿಸ್ ಟ್ರಾವರ್ಸ್ ಅವರು, ಈ ವಿಜ್ಞಾನ ಸಂಸ್ಥೆಯ ಮೊದಲ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದರು. ನೊಬೆಲ್ ವಿಜೇತ ಸರ್.ಸಿ.ವಿ.ರಾಮನ್, 'IISC'ಯ ಮೊದಲ ಭಾರತೀಯ ನಿರ್ದೇಶಕ. ತದನಂತರದಲ್ಲಿ ಸತೀಶ್ ಧವನ್, C.N.R ರಾವ್ ಅಂತಹ ಮೇರು ವಿಜ್ಞಾನಿಗಳು ಈ ಸಂಸ್ಥೆಯ ನಿರ್ದೇಶಕರಾಗಿ ದುಡಿದಿದ್ದಾರೆ.

1956 ರಲ್ಲಿ, ಭಾರತ ಸರ್ಕಾರದ UGC ಸಂಸ್ಥೆ ಪ್ರಾರಂಭವಾದ ಮೇಲೆ, 'IISC'ಯನ್ನು ಸ್ವತಂತ್ರ ವಿಶ್ವವಿದ್ಯಾಲಯವಾಗಿ ಘೋಷಿಸಲಾಯಿತು. ಭಾರತದಲ್ಲಿ ಮೊತ್ತಮೊದಲ ಸ್ನಾತಕೋತ್ತರ (ಮಾಸ್ಟರ್) ಪದವಿಯನ್ನು ಪ್ರಾರಂಭಿಸಿದ ಹೆಗ್ಗಳಿಕೆ ಈ ಸಂಸ್ಥೆಯದ್ದು. ಇಲ್ಲಿನ ವಿದ್ಯಾರ್ಥಿಗಳ ಸಂಶೋಧನೆಗಳು, ಬರಹಗಳು, ಪ್ರಯೋಗಗಳ ಶ್ರೇಷ್ಠತೆಯಿಂದ, ಇಡೀ ಭಾರತದಲ್ಲಿ ಇಂದು "IISC" ಎಂದರೆ ಅತ್ಯಂತ ಪ್ರತಿಷ್ಠಿತ ವಿದ್ಯಾಲಯವಾಗಿ ಬೆಳೆದಿದೆ. ವಿವೇಕಾನಂದರ ಸಲಹೆ, ಟಾಟಾರ ಪರಿಶ್ರಮ, ಮಹಾರಾಜರ ಉದಾರ ಸಹಾಯಗಳೊಂದಿಗೆ ತಲೆಯೆತ್ತಿರುವ ಈ ಸಂಸ್ಥೆ, ರಾಷ್ಟ್ರದ ವೈಜ್ಞಾನಿಕ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದೆ.



•

ಶಿಕ್ಷಣ ಸೌರಭ

# ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ (ಆರ್.ಎಂ. ಎಸ್. ಎ.) ಒಂದು ಅವಲೋಕನ

➢ ಹಿಂದಿನ ಸಂಚಿಕೆಯಿಂದ




**ವಿ. ರಾಜ**
**ರಾಜ್ಯ ಶೈಕ್ಷಣಿಕ ಪ್ರಕೋಷ್ಠ ಪ್ರಮುಖರು**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**


ಎಲ್ಲ ಹದಿಹರೆಯದವರಿಗೆ ಮಾದರಿಯ ಪ್ರಕಾರ ಪ್ರೌಢ / ಮಾಧ್ಯಮಿಕ ಶಾಲಾ ಶಿಕ್ಷಣದ ಲಭ್ಯತೆಯನ್ನು ಒದಗಿಸಬೇಕು.– ಹತ್ತಿರದ ಸ್ಥಳದಲ್ಲಿ (ಪ್ರೌಢ/ಮಾಧ್ಯಮಿಕ ಶಾಲೆಯು 5–10 ಕಿ. ಮೀ. ಅಂತರದೊಳಗೆ ಇರಬೇಕು) ಸುವ್ಯವಸ್ಥಿತ ಮತ್ತು ಸುರಕ್ಷಿತ ಸಾಗಣಿಕೆ ಮತ್ತು ವಸತಿಯನ್ನು ಸ್ಥಳೀಯ ಅನುಕೂಲತೆ ಗಮನಿಸಿ ಮಾಡಬೇಕು. ಮುಕ್ತ ಶಾಲೆಯನ್ನು ಹೊಂದಬಹುದು. ಆದರೂ ಬೆಟ್ಟ ಮತ್ತು ಕಠಿಣಪ್ರದೇಶಗಳಲ್ಲಿ ಮಾದರಿಯನ್ನು ತುಸು ಸಡಿಲಿಸಬಹುದು. ಇಂಥಹ ಪ್ರದೇಶಗಳಲ್ಲಿ ವಸತಿ ಶಾಲೆಯ ಸ್ಥಾಪನೆಗೆ ಆದ್ಯತೆ ಇರಬೇಕು.

ಯಾವುದೆ ಮಗುವು ಲಿಂಗ, ಜಾತಿ, ಆರ್ಥಿಕ, ಸಾಮಾಜಿಕ, ವಿಕಲಚೇತನತೆ ಮತ್ತು ಇತರೆ ಅಡೆತಡೆಗಳಿಂದಾಗಿ ಗುಣಾತ್ಮಕ ಪ್ರೌಢ/ಮಾಧ್ಯಮಿಕ ಶಿಕ್ಷಣದಿಂದ ವಂಚಿತನಾಗದಂತೆ ಖಾತ್ರಿ ನೀಡಬೇಕು. ಬೌದ್ಧಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಲಿಯುವಿಕೆಯ ಪರಿಣಾಮವಾಗಿ ಪ್ರೌಢ / ಮಾಧ್ಯಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಾಗಬೇಕು.

ಪ್ರೌಢ/ಮಾಧ್ಯಮಿಕ ಶಿಕ್ಷಣ ಪಡೆಯುವ ಎಲ್ಲ ಮಕ್ಕಳೂ ಉತ್ತಮ ಗುಣಮಟ್ಟ ಶಿಕ್ಷಣ ಪಡೆವ ಖಾತ್ರಿ ಇರಬೇಕು.

ಮೇಲೆ ಕಾಣಿಸಿದ ಈ ಎಲ್ಲ ಉದ್ದೇಶಗಳನ್ನು ಸಾಧಿಸಿದರೆ ತನ್ನಿಂದ ತಾನೆ ಇತರೆ ವಿಷಯಗಳ ಜೊತೆ ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿ ಗಣನೀಯ ಪ್ರಗತಿ ಕಾಣುವುದು.

ಪ್ರೌಢ/ಮಾಧ್ಯಮಿಕ ಶಿಕ್ಷಣದ ಸಾರ್ವತ್ರಿಕರಣದ ಸಂದರ್ಭದಲ್ಲಿ, ಹೆಚ್ಚಿನ ಪ್ರಮಾಣದ ಹೂಡಿಕೆ, ಹೆಚ್ಚುವರಿ ಶಾಲೆಗಳು, ಹೆಚ್ಚುವರಿ ಕೋಣೆಗಳು, ಶಿಕ್ಷಕರು ಮತ್ತು ಇತರೆ ಸೌಲಭ್ಯಗಳ ಸಂಖ್ಯೆಯ ಸವಾಲನ್ನು ಎದುರಿಸಲು, ಗುಣಮಟ್ಟ ಮತ್ತು ವಿಶ್ವಾಸಾರ್ಹತೆಗಾಗಿ ಮಾಡಲೇ ಬೇಕು ಇದಲ್ಲದೆ ಶೈಕ್ಷಣಿಕ ಅಗತ್ಯಗಳು, ಅಗತ್ಯ ಭೌತಿಕ ಮೂಲ ಸೌಕರ್ಯಗಳು, ಮಾನವ ಸಂಪನ್ಮೂಲ, ಶೈಕ್ಷಣಿಕ ಕಾರ್ಯಕ್ರಮಗಳ ಅನುಷ್ಠಾನದ ಪರಿಣಾಮಕಾರಿ ಮೇಲುಸ್ತುವಾರಿಯು ಅಗತ್ಯ. ಪ್ರೌಢ/ಮಾಧ್ಯಮಿಕ ಶಿಕ್ಷಣದ ಲಭ್ಯತೆಯನ್ನು ಸಾರ್ವತ್ರಿಕರಿಸಲು ಮತ್ತು ಗುಣ ಮಟ್ಟವನ್ನು ಸುಧಾರಿಸಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

## ಲಭ್ಯತೆ

ದೇಶದ ವಿಭಿನ್ನ ಪ್ರದೇಶಗಳಲ್ಲಿ ದೊರೆಯುವ ಶಾಲಾ ಸೌಲಭ್ಯಗಳ ನಡುವೆ ಬಹಳ ವ್ಯತ್ಯಾಸವಿದೆ. ಖಾಸಗಿ ಶಾಲೆ ಮತ್ತು ಸರಕಾರಿ ಶಾಲೆಗಳ ನಡುವೆಯೂ ವ್ಯತ್ಯಾಸವಿದೆ. ಗುಣಾತ್ಮಕ ಪ್ರೌಢ / ಮಾಧ್ಯಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಒದಗಿಸಲು ರಾಷ್ಟ್ರ ಮಟ್ಟದಲ್ಲಿ ವಿಶೇಷ ವಿನ್ಯಾಸದ ಮಂಡಳಿಯ ಮಾದರಿಯ ರಚನೆ ಅತ್ಯಗತ್ಯ. ಪ್ರತಿರಾಜ್ಯದ / ಕೇಂದ್ರಾಡಳಿತ ಪ್ರದೇಶಗಳ ಭೌಗೋಳಿಕ, ಸಾಂಸ್ಕೃತಿಕ, ಸಾಮಾಜಿಕ, ಭಾಷಾ ಮತ್ತು ಜನಸಂಖ್ಯೆಯ ಅಂಶಗಳನ್ನು ಮಾತ್ರ ಗಮನದಲ್ಲಿ ಇಟ್ಟುಕೊಳ್ಳದೆ ಅಗತ್ಯವಿದ್ದಲ್ಲಿ ಸ್ಥಳೀಯ ಅಂಶಗಳನ್ನೂ ಪರಿಗಣಿಸಬೇಕು. ಪ್ರೌಢ / ಮಾಧ್ಯಮಿಕ ಶಾಲೆಯನ್ನು ಸಾಧಾರಣವಾಗಿ ಕೇಂದ್ರೀಯ ವಿದ್ಯಾಲಯಗಳ ಮಾದರಿಗೆ ತುಲನಾತ್ಮಕವಾಗಿರುವಂತೆ ಇರಬೇಕು. ಮೂಲ ಸೌಕರ್ಯಗಳ ಮತ್ತು ಕಲಿಕೆಯ ಸಂಪನ್ಮೂಲದ ಅಭಿವೃದ್ಧಿಯನ್ನು ಈ ವಿಧಾನದಲ್ಲಿ ಮಾಡಲಾಗುವುದು:

- ವಿಸ್ತರಣೆ / ಈಗ ಇರುವ ಪ್ರೌಢ / ಮಾಧ್ಯಮಿಕ ಶಾಲೆಗಳು ಮತ್ತು ಹಿರಿಯ ಪ್ರೌಢ / ಮಾಧ್ಯಮಿಕ ಶಾಲೆಗಳನ್ನು ಈಗಿರುವಲ್ಲಿ ಸರದಿಯ ಮೇಲೆ ನೆಡೆಸುವ ತಂತ್ರ.
- ಹಿರಿಯ ಪ್ರಾಥಮಿಕ ಶಾಲೆಗಳನ್ನು ಚಿಕ್ಕ ಯೋಜನೆ ತಯಾರಿಸುವ ಕ್ರಿಯೆ ಆಧಾರದ ಮೇಲೆ ಎಲ್ಲ ಅಗತ್ಯ ಮೂಲಭೂತ ಸೌಲಭ್ಯ ಮತ್ತು ಶಿಕ್ಷಕರ ಸಮೇತ ಉನ್ನತಿ ಕರಣ, ಹಿರಿಯ ಪ್ರಾಥಮಿಕಶಾಲೆಗಳನ್ನು ಉನ್ನತೀಕರಿಸುವಾಗ ಆಶ್ರಯ ಶಾಲೆಗಳಿಗೆ ಆದ್ಯತೆ ನೀಡಲಾಗುವುದು.
- ಹಿರಿಯ ಪ್ರೌಢ / ಮಾಧ್ಯಮಿಕ ಶಾಲೆಗಳಲ್ಲಿರುವ, ಪ್ರೌಢ / ಮಾಧ್ಯಮಿಕ ಶಾಲೆಗಳನ್ನು ಅಗತ್ಯಕ್ಕೆ ತಕ್ಕಂತೆ ಉನ್ನತೀಕರಿಸಲಾಗುವುದು
- ಹೊಸ ಪ್ರೌಢ / ಮಾಧ್ಯಮಿಕ ಶಾಲೆಗಳನ್ನು / ಹಿರಿಯ ಪ್ರೌಢ / ಮಾಧ್ಯಮಿಕ ಶಾಲೆಗಳನ್ನು ಶಾಲಾ ಸವಲತ್ತು ಲಭ್ಯವಿಲ್ಲದ ಪ್ರದೇಶಗಳಲ್ಲಿ ಶಾಲಾ ನಕ್ಷೆಯ ಪ್ರಕಾರ ತೆರೆಯಲಾಗುವುದು. ಈ ಎಲ್ಲ ಶಾಲೆಗಳು ಕಡ್ಡಾಯವಾಗಿ ಮಳೆಕೊಯಿಲು ಸೌಲಭ್ಯ ಹೊಂದಿರುವವು ಮತ್ತು ವಿಕಲಚೇತನ ಸ್ನೇಹಿಯಾಗಿರುವವು.
- ಈಗಿರುವ ಕಟ್ಟಡಗಳಲ್ಲಿ ಕೂಡಾ ಮಳೆ ಕೊಯಿಲು ವ್ಯವಸ್ಥೆಯನ್ನು ಹೊಂದಲಾಗುವುದು. ಈಗಿರುವ ಶಾಲಾಕಟ್ಟಡಗಳನ್ನು ವಿಕಲಚೇತನ ಸ್ನೇಹಿಗಳಾಗಿ ಬದಲಾಯಿಸಲಾಗುವುದು.
- ಹೊಸ ಶಾಲೆಗಳನ್ನು ಸರ್ಕಾರಿ ಖಾಸಗಿ ಸಹಭಾಗಿತ್ವದ ವಿಧಾನದಲ್ಲಿ ತೆರೆಯಲಾಗುವುದು.

ಮುಂದಿನ ಸಂಚಿಕೆಗೆ....➢

# ಕನ್ನಡ ರಾಜಧಾನಿಯಲ್ಲೊಂದು ಅದ್ದೂರಿಯಾಗಿ ವಿಜೃಂಭಿಸಿದ ಹಿಂದೂ ಆಧ್ಯಾತ್ಮಿಕ, ಸೇವಾ ಜಾತ್ರೆ

ವಿವಿಧ ಹಿಂದೂ ಸಂಘಟನೆಗಳು, ಮಠಮಾನ್ಯಗಳು ಸಮಾಜಸೇವೆ ಮಾಡುತ್ತಿರುವುದನ್ನು ಪರಿಚಯಿಸಲು ಆರ್.ಎಸ್.ಎಸ್.ನ ಹಿರಿಯ ಪ್ರಚಾರಕರಾಗಿದ್ದ ದಿವಂಗತ ಶ್ರೀ ಸೂರ್ಯನಾರಾಯಣ್‌ರಾವ್‌ರವರ ಪ್ರೇರಣೆಯಿಂದ ಪ್ರಾರಂಭವಾದ ಹಿಂದೂ ಆಧ್ಯಾತ್ಮಿಕ ಸೇವಾಜಾತ್ರೆಯು ಚೆನ್ನೈನಲ್ಲಿ 8 ವರ್ಷಗಳ ಹಿಂದೆ ಪ್ರಾರಂಭವಾಗಿ ಕಳೆದೆರಡು ವರ್ಷದಿಂದ ಬೆಂಗಳೂರಿನಲ್ಲೂ ವಿಜೃಂಭಣೆಯಿಂದ ನಡೆಯುತ್ತಾ ಬಂದಿದೆ. ಈ ಮೇಳದ ಪ್ರಮುಖ ಧ್ಯೇಯವೆಂದರೆ ಅರಣ್ಯ ಮತ್ತು ವನ್ಯಜೀವಿಸಂರಕ್ಷಣೆ, ಪರಿಸರ ಪ್ರಜ್ಞೆ, ಕುಟುಂಬ& ಮಾನವೀಯ ಮೌಲ್ಯ, ಸ್ತ್ರೀ ಗೌರವ ಮತ್ತು ರಾಷ್ಟ್ರಭಕ್ತಿಯನ್ನು ಆಧರಿಸಿದ ಮೇಳ. ದಾಸೋಹದಿಂದ ಶಿಕ್ಷಣದವರೆಗೆ, ವಿವಿಧ ಸ್ಪರ್ಧೆಗಳು, ಸೇವಾ ಮಳಿಗೆಗಳು, ಯುವ ಮಂಟಪ, ವಿನೂತನ ಹ್ಯಾಕಥಾನ್ ಸ್ಪರ್ಧೆ(ದೇಶದಲ್ಲಿಯೇ ಮೊದಲಬಾರಿ)ಹೀಗೆ ಹತ್ತು ಹಲವಾರು ಆಕರ್ಷಕ ಕಾರ್ಯಕ್ರಮಗಳನ್ನು ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಡಿಸೆಂಬರ್ 14 ರಿಂದ 18 ರ ವರೆಗೆ ಅದ್ದೂರಿಯಾಗಿ ನಡೆಸಲಾಯಿತು. ಪೂಜ್ಯ ಶ್ರೀ ಶ್ರೀ ಭಗವದಾನಂದ ಸ್ವಾಮೀಜಿ ದಿವ್ಯ ಸಾನಿಧ್ಯದಲ್ಲಿ ಡಿಸೆಂಬರ್ 14 ರಂದು ಖ್ಯಾತ ಸಂಶೋಧಕರು ಮತ್ತು ಚಿಂತಕರಾದ ಡಾ॥ ಚಿದಾನಂದ ಮೂರ್ತಿ ಮತ್ತು ಖ್ಯಾತ ಜನಪದ ಸಾಹಿತಿ ಡಾ॥ ದೊಡ್ಡರಂಗೇಗೌಡರು ಶೋಭಾಯಾತ್ರೆಯನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ 'ಹಿಂದುಗಳು ಕುಬ್ಜರಲ್ಲ, ಅವರ ಮನಸ್ಸು ವಿಶಾಲವಾದುದು. ನಾವು ಭಾರತೀಯರು, ಹಿಂದುಗಳೆಂದು ಹೇಳುವುದರಲ್ಲಿ ಅಭಿಮಾನ ಹೆಚ್ಚಿರಬೇಕು' ಎಂದು ಡಾ॥ ದೊಡ್ಡರಂಗೇಗೌಡರು ಮಾತನಾಡಿದರು. ಸಂಜೆ ನಡೆದ ಮೇಳದ ಉದ್ಘಾಟನಾ ಸಮಾರಂಭದಲ್ಲಿ ಡಾ॥ ಕಸ್ತೂರಿರಂಗನ್, ಮಾಜಿ ಅಧ್ಯಕ್ಷರು–ಇಸ್ರೋ ಇವರ ಅಧ್ಯಕ್ಷತೆಯಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಶ್ರೀ ವೀರೇಶಾನಂದ ಸ್ವಾಮೀಜಿ,ರಾಮಕೃಷ್ಣ ವಿವೇಕಾನಂದ ಆಶ್ರಮ, ತುಮಕೂರು ಇವರು ಮಾತನಾಡಿ 'ಭಾರತದಲ್ಲಿ ಸಹಿಷ್ಣುತೆ ಇದ್ದುದರಿಂದಲೇ ಪ್ರಪಂಚದ ಎಲ್ಲಾ ದೇಶಗಳಲ್ಲಿರುವ ಮಸೀದಿಗಳಿಗಿಂತ ನಮ್ಮ ದೇಶದಲ್ಲಿಯೇ ಅತಿಹೆಚ್ಚಿದೆ. ಮನೆ ಬಾಗಿಲಿಗೆ ಬಂದವರಿಗೆ ಕೈಯಲ್ಲಿದ್ದದ್ದನ್ನು ಹಿಂದುಗಳು ದಾನ ಮಾಡುತ್ತಾರೆ. ಅಶಕ್ತರು, ದುರ್ಬಲರಿಗೆ ಸಹಾಯ ಮಾಡಿದರೂ ಏನನ್ನೂ ಅಪೇಕ್ಷಿಸರು, ಸಂಖ್ಯೆ ಹೆಚ್ಚಿಸಿಕೊಳ್ಳುವ ದುರಾಸೆ ಹಿಂದುಗಳಿಗಿಲ್ಲ' ಎಂದು ತಿಳಿಸಿದರು. ಪ್ರೊ॥ ಎಂ.ಕೆ ಶ್ರೀಧರ್ ರವರು ಪ್ರಾಸ್ತಾವಿಕ ನುಡಿಯಾಡಿದರು.

ಡಿಸೆಂಬರ್ 15 ರಂದು ಬೆಳಗ್ಗೆ ಜಗದ್ಗುರು ಪೂಜ್ಯ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಜೀ ಇವರ ಸಾನಿಧ್ಯದಲ್ಲಿ 'ರಾಷ್ಟ್ರವಂದನಾ' ಕಾರ್ಯಕ್ರಮ ನಡೆಯಿತು. ಸ್ವಾಮೀಜಿ ಆಶೀರ್ವಚನ ನೀಡಿ ಮಾತನಾಡುತ್ತಾ 'ಸಂಸ್ಕೃತಿ ಇಲ್ಲದ ದೇಶ, ವ್ಯಕ್ತಿ ಉಳಿಯಲು ಸಾಧ್ಯವಿಲ್ಲ. ಒಂದೊಂದು ದೇಶಕ್ಕೆ ಒಂದೊಂದು ಶಕ್ತಿಯಿದೆ. ನಮ್ಮ ದೇಶದ ಪ್ರಾಣ ಧರ್ಮದಲ್ಲಿದೆ' ಎಂದು ನುಡಿದರು. ಸಂಜೆ ಡಾ॥ ಕಿಕ್ಕೇರಿ ಕೃಷ್ಣಮೂರ್ತಿಯವರ ನೇತೃತ್ವದಲ್ಲಿ 'ಬಾರಿಸು ಕನ್ನಡ ಡಿಂಡಿಮವ.. ಸುಗಮ ಸಂಗೀತ ಕಾರ್ಯಕ್ರಮ ನೆರವೇರಿತು.

ಡಿಸೆಂಬರ್ 16ರಂದು ತುಮಕೂರು ಸಿದ್ಧಗಂಗಾ ಮಠದ ಪೂಜ್ಯ ಶ್ರೀಶ್ರೀ ಮ.ನಿ.ಪ್ರ. ಸಿದ್ಧಲಿಂಗ ಸ್ವಾಮೀಜಿಯ ದಿವ್ಯ ಸಾನಿಧ್ಯದಲ್ಲಿ ಸ್ತ್ರೀ ಗೌರವ ನಿಮಿತ್ತ 'ಮಾತೃವಂದನಾ' ನಡೆಯಿತು. ಮಧ್ಯಾಹ್ನ ಆರೋಗ್ಯಕರ ಜೀವನದ ಬಗ್ಗೆ ಡಾ॥ ಮಂಜುನಾಥ್‌ರಿಂದ ಮಾರ್ಗದರ್ಶನ ಮಾಡಲಾಯಿತು. ಸಂಜೆ ಶ್ರೀ ವಿದ್ಯಾಭೂಷಣರು ಭಕ್ತಿಗೀತೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ಡಿಸೆಂಬರ್ 17ರಂದು ಬೆಳಗ್ಗೆ ಕೂಡಲಸಂಗಮದ ಪೂಜ್ಯ ಶ್ರೀ ಶ್ರೀ ಬಸವಜಯ ಮೃತ್ಯುಂಜಯ ಮಹಾಸ್ವಾಮೀಜಿಯ ದಿವ್ಯ ಸಾನಿಧ್ಯದಲ್ಲಿ ಪರಿಸರ ಕಾಳಜಿಯ ಉದ್ದೇಶದಿಂದ 'ಭೂಮಿವಂದನಾ' ಕಾರ್ಯಕ್ರಮ. 2000ಕ್ಕೂ ಹೆಚ್ಚು ರೈತ ದಂಪತಿಗಳು ಭೂಮಿ ವಂದನೆಯಲ್ಲಿ ಭಾಗವಹಿಸಿದ್ದರು. ಸಂಜೆ ಆಳ್ವಾಸ್ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಂದ 'ಆಳ್ವಾಸ್ ಸಾಂಸ್ಕೃತಿ ಸೌರಭ' ಎಲ್ಲರ ಮನಮೆಚ್ಚುವ ರೀತಿಯಲ್ಲಿ ಮೂಡಿಬಂದಿತು.

ಡಿಸೆಂಬರ್ 18 ರ ಮುಂಜಾನೆ ಈಶಾ ಫೌಂಡೇಶನ್ ವತಿಯಿಂದ 'ಯೋಗಾಸನಾ ಪರಿವರ್ತನೆಯ ಸಾಧನ' ಎಂಬ ಕಾರ್ಯಕ್ರಮ ನೆರವೇರಿತು. ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಸ್ವಾಮೀಜಿಗಳು, ಪುತ್ತಿಗೆ ಮಠ ಉಡುಪಿ ಇವರ ಸಾನಿಧ್ಯದಲ್ಲಿ ಕುಟುಂಬ ಹಾಗೂ ಮಾನವೀಯ ಮೌಲ್ಯಗಳ ಬಗ್ಗೆ 'ಕುಟುಂಬ ವಂದನಾ' ಕಾರ್ಯಕ್ರಮ ಬಹಳ ಚೆನ್ನಾಗಿ ಮೂಡಿಬಂದಿತು. ಕೂಡುಕುಟುಂಬದಲ್ಲಿನ ಮನೆಯ ಹಿರಿಯ ಸದಸ್ಯರ ಪಾದವನ್ನು ಅರಿಶಿಣ ಕುಂಕುಮ, ಹೂವಿನಿಂದ ಪೂಜಿಸುವ ದೃಶ್ಯ ಎಲ್ಲರಲ್ಲೂ ಆತ್ಮೀಯ ಭಾವನೆಗಳನ್ನು ಜಾಗೃತಗೊಳಿಸಿತು. ಶ್ರೀ ಶ್ರೀ ಸುಗುಣೇಂದ್ರ ಸ್ವಾಮೀಜಿ ಮಾತನಾಡುತ್ತಾ 'ಪಾಶ್ಚಾತ್ಯೀಕರಣದ ಪ್ರಭಾವದಿಂದ ಅವಿಭಕ್ತ ಕುಟುಂಬಗಳು ನಾಶವಾಗುತ್ತಿದೆ' ಎಂದು ವಿಷಾದ ವ್ಯಕ್ತಪಡಿಸಿದರು.

ಸಂಜೆ ಮಂತ್ರಾಲಯದ ಪೂಜ್ಯ ಶ್ರೀ ಶ್ರೀ 108 ವಿಭುದೇಂದ್ರತೀರ್ಥ ಸ್ವಾಮೀಜಿ, ಶ್ರೀ ಮಾದಾರ ಚೆನ್ನಯ್ಯ ಸ್ವಾಮೀಜಿ ಮತ್ತು ಶ್ರೀ ಶ್ರೀ ಮ.ನಿ.ಪ್ರ. ಬಸವಾನಂದ ಸ್ವಾಮೀಜಿ ಇವರುಗಳ ದಿವ್ಯ ಸಾನಿಧ್ಯದಲ್ಲಿ ಸಮಾರೋಪ ಸಮಾರಂಭ ಜರುಗಿತು. ಹಿಂದೂ ಆಧ್ಯಾತ್ಮಿಕ ಮತ್ತು ಸೇವಾ ಸಂಸ್ಥೆಯ

ಪುಟ 9 ಕ್ಕೆ ➢

ಸುತ್ತೋಲೆ

# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು

**ವಿಷಯ: ಸರ್ಕಾರಿ ಪ್ರೌಢಶಾಲೆ/ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ)ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರ ಸಿಬ್ಬಂದಿಯ ಹೆಸರುಗಳನ್ನು ಹಾಜರಾತಿ ವಹಿಯಲ್ಲಿ ನಮೂದಿಸುವ ಕುರಿತು.**

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ–8 ಮತ್ತು 9ರಲ್ಲಿ ಕ್ರಮವಾಗಿ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ಗ್ರೇಡ್–1 ದೈಹಿಕ ಶಿಕ್ಷಣ ಶಿಕ್ಷಕರ ಸಂಘ(ರಿ) ಮತ್ತು ಅಧ್ಯಕ್ಷರು ಕರ್ನಾಟಕ ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘ(ರಿ) ಇವರು ಮನವಿ ಸಲ್ಲಿಸಿ, ಸರ್ಕಾರಿ ಪ್ರೌಢಶಾಲೆ/ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ)ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ/ ಬೋಧಕೇತರ ಸಿಬ್ಬಂದಿಯ ಹೆಸರುಗಳನ್ನು ಹಾಜರಾತಿ ವಹಿಯಲ್ಲಿ ನಮೂದಿಸುವ ಕುರಿತು ಈ ಕಛೇರಿಯಿಂದ ನೀಡಿರುವ ಆದೇಶಗಳಲ್ಲಿನ ಗೊಂದಲ ನಿವಾರಿಸುವ ಬಗ್ಗೆ ಮಾರ್ಗದರ್ಶನ ಕೋರಿರುವುದನ್ನು ಪರಿಶೀಲಿಸಿದೆ.

ಉಲ್ಲೇಖ–1 ರಿಂದ 7ರವರೆಗಿನ ಆದೇಶಗಳಲ್ಲಿ ಪ್ರೌಢಶಾಲೆಗಳಲ್ಲಿ ಹಾಜರಾತಿ ನಿರ್ವಹಣೆ ಹಾಗೂ ಸೇವಾ ಜೇಷ್ಠತೆ ಅನುಗುಣವಾಗಿ ಪ್ರಭಾರ ವಹಿಸುವ ಬಗ್ಗೆ ಕ್ರಮ ವಹಿಸಲು ತಿಳಿಸಲಾಗಿತ್ತು. ಈ ಎಲ್ಲಾ ಆದೇಶಗಳಲ್ಲಿನ ಗೊಂದಲವನ್ನು ನಿವಾರಿಸುವ ಸಲುವಾಗಿ ಪ್ರಸ್ತುತ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳಂತೆ ಹಾಗೂ ಮುಂದಿನ ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿಯಾಗುವವರೆಗೂ ಕೆ.ಸಿ.ಎಸ್.ಆರ್. ನಿಯಮ 68 ಹಾಗೂ ಉಲ್ಲೇಖ (5) ರಲ್ಲಿನ ಆದೇಶದಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪ್ರೌಢಶಾಲೆಗಳಲ್ಲಿ ಸಿಬ್ಬಂದಿಗಳ ಹಾಜರಾತಿ ನಿರ್ವಹಣೆ ಬಗ್ಗೆ ಈ ಕೆಳಕಂಡಂತೆ ಕ್ರಮ ವಹಿಸಲು ತಿಳಿಸಿದೆ.

1. 1ನೇ ವೃಂದ–ಮುಖ್ಯಶಿಕ್ಷಕರ ವೃಂದ
2. 2ನೇ ವೃಂದ – ಸಹಶಿಕ್ಷಕರ ವೃಂದ (ಸೇವಾ ಜೇಷ್ಠತೆ ಮೇಲೆ ಗ್ರೇಡ್–1 ಶಿಕ್ಷಕರಿಂದ ಪ್ರಾರಂಭಿಸಬೇಕು)
3. 3ನೇ ವೃಂದ– ದೈಹಿಕ ಶಿಕ್ಷಣ ಶಿಕ್ಷಕರ ವೃಂದ (ಸೇವಾ ಜೇಷ್ಠತೆ ಮೇಲೆ ಗ್ರೇಡ್– ಶಿಕ್ಷಕರಿಂದ ಪ್ರಾರಂಭಿಸಬೇಕು)
4. 4ನೇ ವೃಂದ – ವೃತ್ತಿ ಚಿತ್ರಕಲೆ ಮತ್ತು ಸಂಗೀತ, ನೃತ್ಯ, ನಾಟಕ ಶಿಕ್ಷಕರ ವೃಂದ (ಸೇವಾ ಜೇಷ್ಠತೆ ಮೇಲೆ ಗ್ರೇಡ್– ಶಿಕ್ಷಕರಿಂದ ಪ್ರಾರಂಭಿಸಬೇಕು.
5. 5ನೇ ವೃಂದ– ಬೋಧಕೇತರ ಸಿಬ್ಬಂದಿ (ಜೇಷ್ಠತೆ ಆಧಾರದ ಮೇಲೆ ಲಿಪಿಕ ನೌಕರರ ಹೆಸರು ಮೊದಲು ನಮೂದಿಸಿ ನಂತರ ಡಿ–ದರ್ಜೆ ನೌಕರರ ಹೆಸರನ್ನು ನಮೂದಿಸಬೇಕು.

---

## ವಿಧಾನ ಪರಿಷತ್ತಿನಲ್ಲಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಪ್ರಶ್ನೆಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಉತ್ತರ

1. **ರಾಜ್ಯ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಲು ಸರ್ಕಾರ ಯಾವ ಯೋಜನೆಗಳನ್ನು ಕೈಗೊಂಡಿದೆ; (ವಿವರ ನೀಡುವುದು)**

   **ಉತ್ತರ:** ಸರ್ವ ಶಿಕ್ಷಣ ಅಭಿಯಾನದ ಕಂಪ್ಯೂಟರ್ ಆಧಾರಿತ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಆಯ್ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಕೇಂದ್ರ ಪುರಸ್ಕೃತ ಐಸಿಟಿ ಯೋಜನೆಯಡಿಯಲ್ಲಿ ಆಯ್ದ ಸರ್ಕಾರಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗಿದೆ. 2016–17ನೇ ಸಾಲಿನಿಂದ ರಾಜ್ಯದಲ್ಲಿ ಕಂಪ್ಯೂಟರ್ ಶಿಕ್ಷಣವನ್ನು ( ಟಿಎಎಲ್‌ಪಿ) ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮವನ್ನಾಗಿ ಮರು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

2. **ಮಾಹಿತಿ ಸಿಂಧು, ಐಸಿಟಿ–2 ಮತ್ತು 3ನೇ ಹಂತಗಳಲ್ಲಿ ಎಷ್ಟು ಶಾಲಾ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಲಾಗಿದೆ (ವಿವರ ನೀಡುವುದು)**

   **ಉತ್ತರ:** ಮಾಹಿತಿ ಸಿಂಧು ಯೋಜನೆಯಡಿಯಲ್ಲಿ 1009 ಸರ್ಕಾರಿ ಪ್ರೌಢಶಾಲೆಗಳಲ್ಲಿ, ಐಸಿಟಿ ಫೇಸ್–1 ಯೋಜನೆಯಡಿಯಲ್ಲಿ 480 ಸರ್ಕಾರಿ ಪ್ರೌಢಶಾಲೆಗಳಲ್ಲಿ ಐಸಿಟಿ ಫೇಸ್ –2 ಯೋಜನೆಯಡಿಯಲ್ಲಿ 1571 ಸರ್ಕಾರಿ ಪ್ರೌಢಶಾಲೆಗಳಲ್ಲಿ ಮತ್ತು 708 ಪದವಿ ಪೂರ್ವ ಕಾಲೇಜುಗಳಲ್ಲಿ ಐದು ವರ್ಷಗಳ ಅವಧಿಗೆ ಅನುಷ್ಠಾನಗೊಳಿಸಲಾಗಿದೆ. 2016–17ನೇ ಸಾಲಿನಲ್ಲಿ ಐಸಿಟಿ ಫೇಸ್ –3 ಯೋಜನೆಯನ್ನು ( ಟಿಎಎಲ್‌ಪಿ) ತಂತ್ರಜ್ಞಾನ ಬೆಂಬಲಿತ ಕಲಿಕಾ ಕಾರ್ಯಕ್ರಮವನ್ನಾಗಿ ಮರು ರೂಪಿಸಲಾಗಿದ್ದು. ಈ ಯೋಜನೆಯಡಿ 2016–17ನೇ ಸಾಲಿನಲ್ಲಿ 1000 ಸರ್ಕಾರಿ ಪ್ರೌಢಶಾಲೆಗಳಲ್ಲಿ ಅನುಷ್ಠಾನ ಮಾಡಲಾಗುವುದು. •

➢ ಪುಟ 7 ರಿಂದ..... ಹಿಂದೂ ಆಧ್ಯಾತ್ಮಿಕ, ಸೇವಾ ಜಾತ್ರೆ

ಅಖಿಲ ಭಾರತೀಯ ಸಂಯೋಜಕರಾದ ಶ್ರೀ ಗುಣವಂತ ಸಿಂಗ್ ಕೊಠಾರಿ ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. ಅಭ್ಯಾಗತರಾಗಿ ಯುವ ಬ್ರಿಗೇಡ್‌ನ ಸಂಚಾಲರಾದ ಶ್ರೀ ಚಕ್ರವರ್ತಿ ಸೂಲಿಬೆಲೆಯವರು 'ಭಾರತ ಜಗತ್ತಿನ ಎಲ್ಲಾ ಶ್ರೇಷ್ಠ ಚಿಂತನೆಗಳನ್ನು ಸ್ವಾಗತಿಸಿ ಸ್ವೀಕರಿಸುತ್ತದೆ. ಎಲ್ಲವನ್ನು, ಎಲ್ಲರನ್ನು ಒಗ್ಗೂಡಿಸಿ ನಡೆಸುತ್ತಿರುವ ಹಿಂದೂಧರ್ಮ ಪರಿಸರಕ್ಕೆ ಹತ್ತಿರವಾದ ಮತ್ತು ಪ್ರಾಕೃತಿಕ ಸಮತೋಲವನ್ನು ಹೊಂದಿದ ಜೀವನ ಶೈಲಿಯಾಗಿದೆ' ಎಂದು ಈ ಸಂದರ್ಭದಲ್ಲಿ ಮಾತನಾಡಿದರು. ನಂತರ ವಿದ್ವಾನ್ ಆನೂರು ಅನಂತಕೃಷ್ಣಶರ್ಮಾ ನಿರ್ದೇಶನದ 'ಲಯ ಲಹರಿ' ತಾಳ ವಾದ್ಯಗೋಷ್ಠಿ ಮತ್ತು ಸುರಮಣಿ ವಿದ್ವಾನ್ ಪ್ರವೀಣ್ ಗೋಡ್ಖಿಂಡಿ ಮತ್ತು ನಾದಜ್ಯೋತಿ ವಿದ್ವಾನ್ ಎಂ.ಕೆ ಪ್ರಾಣೇಶ್‌ರಿಂದ ಯುಗಳ ಕೊಳಲುವಾದನ ನೆರವೇರಿತು. ಈ ನಾಲ್ಕು ದಿನದ ಈ ಒಂದು ಜಾತ್ರೆಯಲ್ಲಿ ಸುಮಾರು ಐದು ಲಕ್ಷ ಜನರನ್ನು ಕೇಂದ್ರೀಕರಿಸಿದ ಕೀರ್ತಿ ಹಿಂದೂ ಆಧ್ಯಾತ್ಮಿಕ ಮೇಳಕ್ಕೆ ಸಲ್ಲುತ್ತದೆ.

ಸಮಾಜದ ವಿವಿಧ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಮಳಿಗೆಗಳನ್ನು ಈ ಮೇಳದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಅದರಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವೂ ತನ್ನ ಮಳಿಗೆ ತೆರೆದಿತ್ತು.

## ಹಿಂದೂ ಆಧ್ಯಾತ್ಮಿಕ ಮೇಳದಲ್ಲೊಂದು ಸ್ಟಾರ್‌ನಂತೆ ಮಿನುಗಿದ ಸ್ಟಾಲ್

ಶಿಕ್ಷಕ ಸಂಘದ ಮಳಿಗೆಯಲ್ಲಿ ಸೇವೆ, ಸಂಸ್ಕಾರ, ಶೈಕ್ಷಣಿಕ ಕಾರ್ಯಾಗಾರ, ಹೋರಾಟ, ಶಿಕ್ಷಣ ಮೌಲ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಸಂಘವು ಹಲವು ವರ್ಷಗಳಿಂದ ಯಶಸ್ವಿಯುತವಾಗಿ ನಡೆಸಿದ ಅನೇಕ ಕಾರ್ಯಕ್ರಮಗಳ ಚಿತ್ರಗಳು ಪ್ರೇಕ್ಷಕರನ್ನು ಆಕರ್ಷಿಸಿತು. ಅನೇಕರು ಸಂಘದ ಧ್ಯೇಯೋದ್ದೇಶಗಳನ್ನು ಅರಿತು ಸಂಘದ ಸದಸ್ಯತ್ವನ್ನು ಪಡೆದಕೊಂಡರು. ನಮ್ಮ ಸಂಘದ ಮುಖವಾಣಿಯಾದ 'ಅಖಿಲ ಕರ್ನಾಟಕ 'ಶಿಕ್ಷಕ ಸಮಾಚಾರ' ಪತ್ರಿಕೆಯ ಚಂದಾದಾರರಾದರು. ಸಂಘದ ಪ್ರಕಟನೆಗಳಾದ 'ಶಿಕ್ಷಣಕ್ಕೊಂದು ದೃಷ್ಟಿ ಮತ್ತು ದಿಕ್ಕು', 'ಇತಿಹಾಸ ವಿಕೃತೀಕರಣ', 'ವಿಶ್ವಮಾತೆಭಾರತಿ, 'ಸ್ವಾತಂತ್ರ್ಯ ಸಂಗ್ರಾಮದ ಪ್ರೇರಣಾ ಸ್ರೋತ', 'You are in fact, world Teachers' ಪುಸ್ತಕಗಳು ಹಾಗೂ ಉತ್ಕೃಷ್ಟ ಮಾಹಿತಿ ಉಳ್ಳ ಬಾಳಿನ ಸೂತ್ರ, ಮಾತೃಭಾಷೆ, ಜೀವನದಿ, ಕೈತುತ್ತು ಹೀಗೆ ಅನೇಕ ಪುಸ್ತಕಗಳನ್ನು ಮಳಿಗೆಯಲ್ಲಿ ಪ್ರದರ್ಶಿಸಲಾಗಿತ್ತು. ಎಲ್ಲಾ ಪುಸ್ತಕಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರ ಮನ, ಮನೆ ಸೇರಿದವು.

7ನೇ ತರಗತಿಯ ವಿದ್ಯಾರ್ಥಿನಿ ಪ್ರದರ್ಶಿಸಿದ ಕೆಲವು ಪುಸ್ತಕಗಳನ್ನು ಪಡೆದು ಓದಿ ಆನಂದಿಸಿ ಮರುದಿನ ನಮ್ಮ ಮಳಿಗೆಗೆ ಬಂದು ಪುಸ್ತಕಗಳ ಬಗ್ಗೆ ಅವಳ ಭಾವನೆಗಳನ್ನು 10 ನಿಮಿಷದಲ್ಲಿ ನಿರರ್ಗಳವಾಗಿ ಕನ್ನಡಭಾಷೆಯಲ್ಲಿ ವಿವರಿಸಿದ್ದು ವಿಶೇಷವಾಗಿತ್ತು. ಪುಸ್ತಕಗಳ ಮೂಲಕ ದೇಶಭಕ್ತಿ, ಸೇವೆ, ಸಂಸ್ಕಾರ, ಮಾತೃಭಾಷೆಯ ಪ್ರೇಮ, ಸ್ವಾತಂತ್ರ್ಯಕ್ಕಾಗಿ ನೆತ್ತರು ತೆತ್ತ ಮಹಾನ್ ವ್ಯಕ್ತಿಗಳ ಪರಿಚಯ, ಗುರು–ಹಿರಿಯರಲ್ಲಿ ಭಕ್ತಿ ಇವೆಲ್ಲವನ್ನು ಲಕ್ಷಾಂತರ ಜನರಿಗೆ ಉಣಬಿಡಿಸಿದ ಕೀರ್ತಿ ನಮ್ಮ ಸಂಘಕ್ಕೆ ಲಭಿಸಿದೆ. ಸರಳ ಚಾನೆಲ್‌ನಲ್ಲಿ ಶ್ರೀಮತಿ ವರಲಕ್ಷ್ಮಿಯವರು ಶಿಕ್ಷಕ ಸಂಘ ಮತ್ತು ಆಧ್ಯಾತ್ಮಿಕ ಮೇಳದ ಬಗ್ಗೆ ಅನುಭವಗಳನ್ನು ಹಂಚಿಕೊಂಡರು.

ಅನೇಕ ಸಂಪನ್ಮೂಲ ವ್ಯಕ್ತಿಗಳು, ಅಂಕಣಕಾರರು, ವರದಿಗಾರರು, ವಿದ್ಯಾರ್ಥಿಗಳು, ವಿವಿಧ ಸೇವಾ ಕ್ಷೇತ್ರದಲ್ಲಿ ಸೇವೆಸಲ್ಲಿಸುತ್ತಿರುವ ಸಂಘ ಸಂಸ್ಥೆಗಳು, ಗಣ್ಯವ್ಯಕ್ತಿಗಳು, ಸಮಾಜ ಸೇವಕರು ನಮ್ಮ ಮಳಿಗೆಗೆ ಭೇಟಿಕೊಟ್ಟು ಸಂಘವನ್ನು ಪರಿಚಯಿಸಿಕೊಂಡರು. ಶ್ರೀ ಕೃ ನರಹರಿಗಳು ಮತ್ತು ಶ್ರೀ ನಿರ್ಮಲ್ ಜೀ ನಮ್ಮ ಮೇಳಕ್ಕೆ ಭೇಟಿ ನೀಡಿ ಉತ್ತಮ ಮಾರ್ಗದರ್ಶನ ನೀಡಿದರು. ಲಕ್ಷಾಂತರ ಜನಸಾಗರಕ್ಕೆ ಸಂಘದ ಪರಿಚಯ ವಾಗುವಂತೆ ಮಾಡಿದ ಹಿಂದೂ ಆಧ್ಯಾತ್ಮಿಕ ಮೇಳದ ಆಯೋಜಕರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತದೆ.

✍ **ವರಲಕ್ಷ್ಮಿ,** ಕಛೇರಿ ಕಾರ್ಯದರ್ಶಿ

➢ ಪುಟ 3 ರಿಂದ..... ಸುಭಾಷ್ ಚಂದ್ರ ಬೋಸ್...

ಸ್ಥಾಪನೆಯಾಯಿತು. ಹಾಗೆ ನೋಡೋದಾದ್ರೆ, ಅಂಗೈ ಅಗಲವಷ್ಟೇ ಇದ್ದರೂ, ಭಾರತದ ಭೂಮಿಯನ್ನು ಪೂರ್ಣ ಸ್ವತಂತ್ರಗೊಳಿಸಿದ ದೊಡ್ಡ ಕೀರ್ತಿ ಸುಭಾಷರಿಗೆ ಸಲ್ಲಬೇಕು.

ಈ ವಿಜಯದಿಂದ ಉತ್ಸಾಹಿತರಾದ ಸೈನಿಕರು, ಮುಂದೆ ಬರ್ಮಾದ ಮೂಲಕ ಭಾರತದ ಗಡಿಭಾಗದಲ್ಲಿ ಬಂದು ನಿಂತರು. ದುರ್ದೈವದಿಂದ 1944 ರಲ್ಲಿ, ದ್ವಿತೀಯ ಮಹಾಯುದ್ಧದಲ್ಲಿ ಜರ್ಮನಿ ಶರಣಾಗಿದ್ದರಿಂದ , ಬೋಸರ ಮುಂದಿನ ನಡೆಗಳಿಗೆ ಅಡ್ಡಗಾಲಾಗಿತ್ತು. ಮುಂದಿನ ಯೋಜನೆಗಳಿಗೆ ರಷ್ಯಾದ ಸಹಾಯವನ್ನು ಕೇಳಲು ಹೊರಟ ಬೋಸರು, ವಿಮಾನಯಾನ ದಲ್ಲಿ ಅನುಮಾನಾಸ್ಪದವಾಗಿ ಮರಣ ಹೊಂದಿದರು. ಇಂದಿಗೂ ಅನೇಕ ಸಮಿತಿಗಳು ಬೋಸರ ಸಾವಿನ ರಹಸ್ಯವನ್ನು ತಿಳಿದುಕೊಳ್ಳಲು ಶ್ರಮಪಟ್ಟಿವೆ.

ಅದೇನೇ ಇರಲಿ. ಒಬ್ಬ ಸಾಮಾನ್ಯನಿಗೆ ಊಹಿಸಲಾಗದಷ್ಟು ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ, ದೇಶವನ್ನೇ ಸದಾ ಧ್ಯಾನಿಸಿ, ಎಲ್ಲ ಥರದ ಅಪಾಯಗಳನ್ನು ಮೈಮೇಲೆಳೆದುಕೊಂಡು ಹೋರಾಡಿದ ಧೀರೋದಾತ್ತ ವ್ಯಕ್ತಿತ್ವ ಸುಭಾಷರದ್ದು. ಆದರೂ, ಈ ದೇಶದಲ್ಲಿ ಅವರಿಗೆ ನಿಜವಾಗಿ ಸಿಗಬೇಕಿದ್ದ ಪ್ರಾತಿನಿಧ್ಯ ಸಿಕ್ಕಿಲ್ಲ ಅಂತಲೇ ಅನೇಕ ದೇಶಾಭಿಮಾನಿಗಳ ಅಭಿಪ್ರಾಯ. ಯಾವ ಸರ್ಕಾರ ಏನೇ ಮಾಡಲಿ, ನಾವಂತೂ ಅವರ ಹುಟ್ಟಿದ ದಿನದ ಪ್ರಯುಕ್ತ, ಬೋಸರಿಗೆ ಭಾವನಮನವನ್ನು ಅರ್ಪಿಸೋಣ..

ಜೈ ಹಿಂದ್..

●

ಆದರ್ಶ ಶಿಕ್ಷಕರು

# ಆದರ್ಶ ಶಿಕ್ಷಕರು– ವೆಂಕಣ್ಣಯ್ಯ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

**ಶಂಕರಾಚಾರ್ಯರ ಪ್ರಶ್ನೋತ್ತರ ಮಾಲಿಕೆಯಲ್ಲಿನ ಎರಡು ಪ್ರಶ್ನೆಗಳು ಮತ್ತು ಅವುಗಳ ಉತ್ತರ ಹೀಗಿದೆ.**

**ಪ್ರಶ್ನೆ 1 : ಕಾ ಕಲ್ಪಲತಾಮೋಕೇ? ಲೋಕದಲ್ಲಿ ಯಾವುದು ಕಲ್ಪಲತೆ?**

**ಉತ್ತರ:** 'ಸಚ್ಛಿಷ್ಯಾರ್ಪಿತಾ ವಿದ್ಯಾ ಸಚ್ಛಿಷ್ಯನಿಗೆ ಕಲಿಸಿದ ವಿದ್ಯೆ,

**ಪ್ರಶ್ನೆ 2 'ಕೋ ಗುರು? ಗುರುವೆಂಬುವವನಾರು?**

**ಉತ್ತರ:** ಅದಿಗತ ತತ್ವಃ ಶಿಷ್ಯಹಿತಾಯೋದ್ಯತಃ ಸತತಂ ಯಥಾರ್ಥವನ್ನು ತಿಳಿದು ಸದಾ ಶಿಷ್ಯರ ಕ್ಷೇಮವನ್ನು ಬಯಸುವವನು.

ಶಂಕರರು, ವೆಂಕಣ್ಣಯ್ಯನವರ ಜೀವನವನ್ನು ಗಮನಿಸಿದರೆ ಆದಿಶಂಕರರು ಈ ಪ್ರಶ್ನೋತ್ತರಗಳನ್ನು ಅವರ ಕುರಿತೇ ಬರೆದಿರಬಹುದು ಎಂದೆನಿಸದಿರದು!

**ಯಾರೀ ವೆಂಕಣ್ಣಯ್ಯ?** ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನಲ್ಲಿರುವ ಒಂದು ಪುಟ್ಟ ಊರು 'ತಳಕು' 1889ರ ಅಕ್ಟೋಬರ್ 1 ರಂದು ತಳುಕಿನ ಸುಬ್ಬಣ್ಣ ಮತ್ತು ಲಕ್ಷ್ಮೀದೇವಮ್ಮ ನವರ ಹಿರಿಯ ಮಗನಾಗಿ ಹುಟ್ಟಿದ ಮಗನೇ ವೆಂಕಣ್ಣಯ್ಯ. ಬಾಲ್ಯದಲ್ಲೇ ಮಹಾಪ್ರತಿಭಾಶಾಲಿ. ವಯಸ್ಸು 12 ದಾಟುವಷ್ಟರಲ್ಲಿ ಅಂದಿನ ಕಾಲದ 5 ರೂ ಪರೀಕ್ಷೆಯಲ್ಲಿ ಅವರೂರಿಂದ ತೇರ್ಗಡೆ ಯಾದ ಏಕೈಕ ಬಾಲಕ! ಸರ್ಕಾರೀ ಕೆಲಸ ಕೈ ಚಾಚಿ ಕರೆಯುತ್ತಿತ್ತು. ಆದರೆ ವಯಸ್ಸು 18 ಆಗಿರಲಿಲ್ಲವಲ್ಲ ಅದಕ್ಕಾಗಿ ಮುಂದಿನ ಎರಡು ವರ್ಷಗಳಲ್ಲಿ ಚಳ್ಳಕೆರೆಯಲ್ಲಿದ್ದು ಇಂಗ್ಲೀಷ್ ಲೋಯರ್ ಸೆಕೆಂಡರಿ ಪರೀಕ್ಷೆ ಮುಗಿಸಿದ. ಮುಂದಿನ 3 ವರ್ಷ ಚಿತ್ರದುರ್ಗದಲ್ಲಿ ಓದಿ ಮುಗಿಸಿ, ಮೈಸೂರಿನ ಮಹಾರಾಜಾ ಕಾಲೇಜಿಗೆ ಎಫ್ ಎ ತರಗತಿಗೆ ಸೇರಿದ. ವೆಂಕಣ್ಣಯ್ಯನಿಗೆ ಎಲ್ಲ ಪ್ರಶ್ನೆ ಪತ್ರಿಕೆಗಳಿಗೂ ಉತ್ತರ ಬರೆದುಬಂದರೂ ಗಣಿತ ಪರೀಕ್ಷೆಗೆ ಹೋಗಲಿಲ್ಲ! ಗಣಿತದ ಪ್ರಾಧ್ಯಾಪಕರೂ ಆಗಿದ್ದ ಪ್ರಾಂಶುಪಾಲರ ಕೋಪಕ್ಕೆ ತುತ್ತಾಗಿ ಮೈಸೂರು ಬಿಟ್ಟ, ಬಳ್ಳಾರಿಯ ವಾರ್ಡಲಾ ಕಾಲೇಜಿಗೆ ಸೇರಿ ಎಫ್.ಎ ಪರೀಕ್ಷೆ ಮುಗಿಸಿದರು. ಮುಂದಿನ ಬಿ.ಎ ಪದವಿಗೆ ಮೈಸೂರಿಗೇ ಹೋಗಬೇಕಿತ್ತು. ಬಡತನ ಬಾಲ್ಯದಿಂದ ಬೆನ್ನಿಗಂಟಿತ್ತು. ತಂದೆಗೆ ಓದಿಸುವ ಶಕ್ತಿ ಇಲ್ಲ. ಆದರೆ ಚಿಕ್ಕಪ್ಪನ ನೆರವು ಸಿಕ್ಕಿ ಮಹಾರಾಜ ಕಾಲೇಜಿಗೇ ಸೇರಿದ್ದಾಯ್ತು. ಅದೇ ಪ್ರಿನ್ಸಿಪಾಲರು ಇವರ ಭಾಷಾ ಪ್ರೌಢಿಮೆ ನಯ, ವಿನಯಗಳನ್ನು ಕಂಡು ಫೀಯನ್ನು ಮಾಫಿಮಾಡಿದರು. 1908ರಲ್ಲಿ ಬಿ.ಎ ಪರೀಕ್ಷೆಯಲ್ಲಿ ತೇರ್ಗಡೆಯಾಯ್ತು. ಬಿ.ಎ ನಂತರವೇನು? ಮಗ ಕಾನೂನು ಓದಿ ಜಿಲ್ಲಾಧಿಕಾರಿಯಾಗಬೇಕೆಂಬ ಹೆಬ್ಬಯಕೆ ವೆಂಕಣ್ಣಯ್ಯನ ಚಿಕ್ಕಪ್ಪ ಶ್ರೀನಿವಾಸರಾವ್‌ಗೆ. ಅದಕ್ಕೆ ಅಸ್ತು ಎಂದರು ಅಣ್ಣ ಸುಬ್ಬಣ್ಣ. ಪಿತೃ ವಾಕ್ಯ ಪರಿಪಾಲಕ ವೆಂಕಣ್ಣಯ್ಯ ಬಿ.ಎಡ್ ಮಾಡಲು ಮುಂಬಯಿ ತಲುಪಿದ. ತಂದೆಯ ಹಣಕಾಸಿನ ಪರಿಸ್ಥಿತಿ ತಿಳಿದಿದ್ದ ಆತ ಅಂಚೆ ಕಛೇರಿಯಲ್ಲಿ 50 ರೂ. ಸಂಬಳಕ್ಕೆ ಗುಮಾಸ್ತನಾಗಿ ಕೆಲಸಕ್ಕೆ ಸೇರಿದ. ಪ್ರಥಮ ವರ್ಷದ ಲಾ ಪರೀಕ್ಷೆ (ಎಫ್.ಎಲ್) ಪಾಸಾಯ್ತು. ಬಿ.ಎಲ್ ವ್ಯಾಸಂಗವೂ ಸಲೀಸಾಗಿ ನಡೆಯುತ್ತಿದ್ದಾಗ ಆತನ ಮೇಲಾಧಿಕಾರಿ ಕನ್ನಡದವನೆಂಬ ಕಾರಣಕ್ಕಾಗಿ ಹೀಯಾಳಿಸಿದ.( ಶಿವಸೇನೆಯ ಹುಳು ಆಗಲೇ ಆತನ ನೆತ್ತಿಗೇರಿತ್ತೇನೋ?) ಸಾತ್ವಿಕನಾದ ವೆಂಕಣ್ಣಯ್ಯನ ಕನ್ನಡಿಗತನ ಕೆರಳಿತು. ಉಗ್ರನರಸಿಂಹನಾದ. 'ಶಟಪ್' ಎಂದು ಗರ್ಜಿಸಿ ರಾಜೀನಾಮೆ ಪತ್ರವನ್ನು ಅಧಿಕಾರಿಯ ಮುಖಕ್ಕೆಸೆದು ಊರಿನ ಹಾದಿ ಹಿಡಿದ. ಈ ಘಟನೆ ಕನ್ನಡಕ್ಕೆ ಕೆಲಸಮಾಡಲು ಆತನಿಗೆ ಪ್ರೇರಣೆ ನೀಡಿತು. ಆಗಲೇ ಕನ್ನಡ ಎಂ.ಎ. ಮಾಡಲು ನಿರ್ಧರಿಸಿ ಮೈಸೂರಿಗೆ ಬಂದ. ಕನ್ನಡ ಓದುವುದೆಂದರೆ ಕಳಪೆ, ಬುದ್ದಿ ಹೀನರು ಮಾತ್ರ ಮಾಡುವುದು ಎಂದು ಭಾವಿಸುತ್ತಿದ್ದ ಕಾಲ. ಕಾಲೇಜಿನಲ್ಲಿ ಒಬ್ಬಿಬ್ಬರು ಮಾತ್ರ ಎಂಎ ಮಾಡುತ್ತಿದ್ದರು. ಎಲ್ಲರೂ 'ಕನ್ನಡದ ಎಮ್ಮೆ' ಎಂದು ಕಿಚಾಯಿಸುತ್ತಿದ್ದರು. ಆದರೆ ಇದಾವುದಕ್ಕೂ ಕಿವಿಗೊಡದ ವೆಂಕಣ್ಣಯ್ಯ ಕಷ್ಟಪಟ್ಟು ಎಂಎ ಮುಗಿಸಿದರು.

ಬಾಲ್ಯದಿಂದಲೂ ವೆಂಕಣ್ಣಯ್ಯನಿಗೆ ಓದುವ ಚಟ. ತಂದೆ ಸುಬ್ಬಣ್ಣನವರ ಗ್ರಂಥ ಭಂಡಾರವನ್ನೆಲ್ಲಾ 15 ವರ್ಷಪ್ರಾಯದೊಳಗೇ ಓದಿಮುಗಿಸಿದ್ದ. ಏಕಸಂಧಿಗ್ರಾಹಿಯಾಗಿದ್ದ ಅವನು, ಕಾಲೇಜಿನಲ್ಲಿ ತರಗತಿಯ ಪಾಠಗಳನ್ನು ನೆನಪಿಟ್ಟು ಪಾಸಾಗುತ್ತಿದ್ದ. ಉಳಿದ ಸಮಯವೆಲ್ಲಾ ಗ್ರಂಥ ಭಂಡಾರದಲ್ಲೇ ಕಳೆದು ಹೋಗುತ್ತಿತ್ತು.

**ವೃತ್ತಿ ಜೀವನ :** 18ನೇ ವಯಸ್ಸಿಗೇ ವಿವಾಹವಾಗಿದ್ದ ವೆಂಕಣ್ಣಯ್ಯನವರು ಎಂ. ಎ. ಮುಗಿಸುವಾಗ ಎರಡು ಮಕ್ಕಳ ತಂದೆ. ಕೆಲಸ ಹಿಡಿಯಲೇ ಬೇಕಿತ್ತು. ಆಗಲೇ ಧಾರಡವಾಡದ ಬಾಸಲ್ ಮಿಶನ್ ಶಾಲೆಯಿಂದ ಕರೆಬಂತು. ಅಲ್ಲಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದರು. ಅಲ್ಲಿದ್ದಾಗಲೇ ಆಲೂರು ವೆಂಕಟರಾಯರು, ಮುದವೀಡು ಕೃಷ್ಣರಾಯರು ಮುಂತಾದ ಕನ್ನಡಕಲಿಗಳ ಪರಿಚಯವಾಯ್ತು ಬೇರೊಂದು ಹೈಸ್ಕೂಲಿನಲ್ಲಿ ಶಿಕ್ಷಕರಾಗಿದ್ದ ದ.ರಾಬೇಂದ್ರೆಯವರೂ ಜೀವನದ ಗೆಳೆಯರಾದರು. ಕನ್ನಡವು ಒಂದು ಅನಾಗರೀಕ ಭಾಷೆ' ಎಂಬ ಭಾವನೆ ಇದ್ದ ಶಾಲೆಯ ವಾತಾವರಣವನ್ನು ಬದಲಿಸಿ ಕನ್ನಡವೆಂದರೆ ಅಕ್ಕರೆಯ ಸಕ್ಕರೆ ಎಂಬ ವಾತಾವರಣ ಸೃಷ್ಟಿಯಾಯಿತು. ಊರಿನ ಹಿರಿಯರೂ ಅವರ ತರಗತಿಗೆ ಬಂದು ಕುಳಿತುಕೊಳ್ಳುತ್ತಿದ್ದರು. ಮೂರು ವರ್ಷಕಾಲ ಧಾರವಾಡದಲ್ಲಿದ್ದು 1917ರಲ್ಲಿ ಸೇಂಟ್ ಜೋಸೆಫ್ ಕಾಲೇಜಿನಲ್ಲಿ 75 ರೂ. ಸಂಬಳದ ಮೇಲೆ ಇತಿಹಾಸದ ಅಧ್ಯಾಪಕರಾದರು. ಆದರೆ ತಂದೆಯವರು ಮತ್ತು ಚಿಕ್ಕಪ್ಪನಿಗೆ ಅವರು ಸರ್ಕಾರೀ ಕೆಲಸ ಹಿಡಿಯಬೇಕೆಂಬ ಆಗ್ರಹ. ಆಗಲೇ ದೊಡ್ಡಬಳ್ಳಾಪುರ ದಲ್ಲಿ ಸರ್ಕಾರಿ ಶಾಲೆ ಪ್ರಾರಂಭವಾಗಿತ್ತು. ವೆಂಕಣ್ಣಯ್ಯನವರನ್ನು ಅಲ್ಲಿನ ಮುಖ್ಯೋಪಾಧ್ಯಾಯರಾಗಿ ಸರ್ಕಾರ ನೇಮಿಸಿತು. ಕನ್ನಡದ ಖ್ಯಾತ ಹಾಸ್ಯ ಲೇಖಕ ಅಲ್ಲಿ ಅವರ ಶಿಷ್ಯ. ಕೆಲವೇ ತಿಂಗಳಗಳ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಟ್ಯೂಟರ್ ಆಗಿ ನೇಮಕಗೊಂಡರು. ಅವರ ತಂದೆಗೆ ಅತೀವ ಆನಂದವಾಯ್ತು. ತಮ್ಮ ಗೆಳೆಯರೊಂದಿಗೆ ಇನ್ನು ಮುಂದೆ ದೊಡ್ಡ ದೊಡ್ಡ ಅಧಿಕಾರಿ ಗಳಾಗುವವರೆಲ್ಲಾ ನಮ್ಮ ಅಣ್ಣಯ್ಯನ ಶಿಷ್ಯರೇ!' ಎಂದು ಉದ್ಗರಿಸಿದರು.

**ಮುಂದಿನ ಸಂಚಿಕೆಗೆ....➢**

# ಸ್ವಾಮಿ ವಿವೇಕಾನಂದರ ನುಡಿಗಳ ಪ್ರಸ್ತುತತೆ

ಆಧುನಿಕ ಹಿಂದೂ ಸಂತ, ಅಪ್ರತಿಮ ದೇಶಪ್ರೇಮಿ, ಆತ್ಮವಿಶ್ವಾಸಕ್ಕೆ ಮತ್ತೊಂದು ಹೆಸರು, ಯುವಜನರಿಗೆ ಪ್ರೇರಕಶಕ್ತಿಯ ಸ್ಫೂರ್ತಿಯ ನಿರಂತರ ಸೆಲೆ, ಸನಾತನ ಧರ್ಮದ ವೈಶಿಷ್ಟ್ಯವನ್ನು ಜಗತ್ತಿನಾದ್ಯಂತ ಸಾರಿ ಭಾರತದ ಕೀರ್ತಿಪತಾಕೆಯನ್ನು ಎತ್ತಿಹಿಡಿದ ಧೀಮಂತ, ಅದ್ಭುತವಾದ ವಿಚಾರಧಾರೆಗಳಿಂದ ಭಾರತೀಯತೆಯ ಸುಪ್ತಚೇತನವನ್ನು ಬಡಿದೆಬ್ಬಿಸಿದ ಮಹಾನ್‌ಶಕ್ತಿ, ಗುರು ರಾಮಕೃಷ್ಣಪರಮಹಂಸರು ಒಪ್ಪಿಸಿದ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದ ಸಾರ್ಥಕಜೀವಿ, ಭಾರತೀಯರು ಯಾರ ಎದುರಿಗೂ ತಲೆತಗ್ಗಿಸಬೇಕಾಗಿಲ್ಲ, ಹೆಮ್ಮೆಯಿಂದ ತಲೆಎತ್ತಿ ಬಾಳುವಂತಹ ಅಮೂಲ್ಯವಾದ ಸನಾತನ ಧರ್ಮವೆಂಬ ಶಕ್ತಿಯ ಹಿರಿಮೆಯನ್ನು ಎತ್ತಿ ಹಿಡಿದು ಇಡೀ ಜನಾಂಗಕ್ಕೇ ಆತ್ಮಗೌರವನ್ನು ಒದಗಿಸಿದ ವ್ಯಕ್ತಿಯೇ 'ಸ್ವಾಮಿ ವಿವೇಕಾನಂದ. 'ಗುರಿಮುಟ್ಟುವವರೆಗೂ ನಿಲ್ಲದಿರು' ಎಂಬ ಸ್ಫೂರ್ತಿಯ ನುಡಿಗಳೊಂದಿಗೆ ಎಲ್ಲ ಕಾಲಕ್ಕೂ ಎಲ್ಲರಲ್ಲಿಯೂ ಜೀವನದ ಉದ್ದೇಶವನ್ನು, ಜೀವನೋತ್ಸಾಹವನ್ನು ತುಂಬಿದ ಪರಿ ಅನನ್ಯವಾದುದು.

ಒಂದು ನೂರ ಐವತ್ನಾಲ್ಕು ವರ್ಷಗಳ ಹಿಂದೆ ಜನಿಸಿದ ಈ ವ್ಯಕ್ತಿಯನ್ನು ಇಂದಿಗೂ ಸ್ಮರಿಸುತ್ತಾ, ಒಬ್ಬ ಆದರ್ಶ ವ್ಯಕ್ತಿಯೆಂದು ಪರಿಗಣಿಸುವುದು, ಅವರಾಡಿದ ನುಡಿಗಳನ್ನು ನೆನೆದು ರೋಮಾಂಚನಗೊಳ್ಳುವುದು ಎಂದಷ್ಟೇ ಅಲ್ಲದೆ, ಅವರು ಸಾರಿದ ಜೀವನತತ್ತ್ವಗಳು, ಧ್ಯೇಯಗಳು ಇಂದಿಗೂ ಪ್ರಸ್ತುತವೆನಿಸಿವೆಯೆಂಬುದು ಈ ಚೇತನ ಒಂದು ಮಹಾನ್‌ಶಕ್ತಿಯೆಂಬುದನ್ನು ಸಾರುತ್ತದೆ.

ವಿವೇಕಾನಂದರು ಹೊಸದಾಗಿ ಏನನ್ನೂ ಬೋಧಿಸಲಿಲ್ಲ. ಹೊಸತತ್ತ್ವಗಳನ್ನು ಜಾರಿಗೆ ತರಲಿಲ್ಲ. ಹೊಸಧರ್ಮವನ್ನು ಸ್ಥಾಪನೆ ಮಾಡಲಿಲ್ಲ. ನಮ್ಮ ಗೀತೆ, ಉಪನಿಷತ್ತುಗಳು ನೀಡುವ ಸಂದೇಶವನ್ನೇ ಅನುಸರಿಸಿದರು. ಅದನ್ನೇ ತಮ್ಮ ಸಿಂಹವಾಣಿಯಲ್ಲಿ ಜಗತ್ತಿಗೆ ಬೋಧಿಸಿದರು. ಜೀವನದಲ್ಲಿ ಉತ್ಸಾಹವನ್ನು ತುಂಬುವುದು ಇವರ ಧ್ಯೇಯ. ಅದೇ ಇವರ ಸಂದೇಶದಲ್ಲಿರುವುದು. ಇವರ ಬೋಧನೆಯಲ್ಲಿ 'ನಿರಾಶೆ' ಎಂಬ ಪದಕ್ಕೆ ಎಡೆಯಿಲ್ಲ. ಅದು ಎಂತಹ ನಿರಾಶೆಯ ಕತ್ತಲೆಯಲ್ಲಿಯೂ ಇವರ ವಾಣಿ ಆಶೆಯ ಹಣತೆಯನ್ನು ಹಚ್ಚುತ್ತ ಇವರ ಮಾತುಗಳು ವಿಶ್ವವ್ಯಾಪಿಯಾಗಿ ದೇಶ, ಕಾಲಾತೀತವಾಗಿ ಜನರಲ್ಲಿ ಸ್ಫೂರ್ತಿ ತುಂಬುವಂತಹದು. ವಿವೇಕಾನಂದರು ಸನ್ಯಾಸಿಗಳಾದರೂ ಜಗದ ಹವ್ಯಾಸವನ್ನೇ ಬಿಟ್ಟ ಸನ್ಯಾಸಿಗಳ ಗುಂಪಿಗೆ ಸೇರಿದವರಲ್ಲ. ಕಠೋರ ಸನ್ಯಾಸಿಗಳು ನಿಜ. ಆದರೆ ಅದರ ಜೊತೆಗೆ ವೀರದೇಶಭಕ್ತರು, ದೊಡ್ಡ ಕರ್ಮಯೋಗಿಗಳು, ಧ್ಯಾನಸಿದ್ಧರೂ ಆಗಿದ್ದರು. ಅಂತೆಯೇ ಅವರ ಶಿಷ್ಯರು ಕೂಡ ಆಧುನಿಕ ಜೀವನವನ್ನು ಒಪ್ಪಿಕೊಂಡು, ಹಿಂದಿನ ತ್ಯಾಗ, ವೈರಾಗ್ಯವನ್ನೂ ಬಿಡದ ಕರ್ಮಯೋಗಿಗಳಾದರು. ಅದರಲ್ಲಿಯೂ ಸಮಾಜದ ಒಂದು ಪ್ರಬಲ ಶಕ್ತಿಯಾದ ಯುವಜನತೆ ಇವರಿಂದ ಪಡೆದ ಪ್ರೇರಣೆ, ಸ್ಫೂರ್ತಿ ಅಪಾರ ಮತ್ತು ಅನನ್ಯ.

"ಜೀವನ ಪ್ರತಿಯೊಬ್ಬ ಜೀವಿಗೂ ದೇವರು ಕೊಟ್ಟ ಒಂದು ವರ. ಅದನ್ನು ಅಲ್ಲಗಳೆಯಬೇಡಿ. ಸಾಹಸದಿಂದ ಬಾಳಿ, ಸಂತೋಷದಿಂದ ಬಾಳಿ, ಶಾಂತಿಯಿಂದ ಬಾಳಿ". "ಯಾರು ಮತ್ತೊಬ್ಬರಿಗಾಗಿ ಜೀವಿಸುತ್ತಾರೆಯೋ ಅವರು ನಿಜವಾಗಿ ಬದುಕುವರು". "ದೇವರನ್ನು ಹುಡುಕಿಕೊಂಡು ಎಲ್ಲಿಗೆ ಹೋಗುತ್ತೀರಿ? ದರಿದ್ರರು, ದೀನರು, ದುಃಖಿಗಳು ಇವರೆಲ್ಲ ದೇವರಲ್ಲವೇ? ಇವರು ನಿಮ್ಮ ದೇವರಾಗಲಿ, ಇವರ ಒಳಿತಿಗಾಗಿ ಆಲೋಚನೆ. ಇವರಿಗಾಗಿ ದೇವರನ್ನು ಪ್ರಾರ್ಥಿಸಿ".

ಇವು ವಿವೇಕಾನಂದರ ವಿಚಾರಗಳು. ಈ ಅಂಶಗಳನ್ನು ಕಾರ್ಯರೂಪಕ್ಕಿಳಿಸುವ ಹಲವು ಯೋಜನೆಗಳನ್ನೂ ಅವರು ಕೈಗೊಂಡರು. ಪರೋಪಕಾರಕ್ಕಾಗಿ ಹಲವು ಸಂಸ್ಥೆಗಳನ್ನು ತೆರೆದರು. ವಿದ್ಯಾಸಂಸ್ಥೆಗಳು, ಅಶಕ್ತ ಪೋಷಕಾಲಯಗಳು, ಯಾಂತ್ರಿಕ ಮತ್ತು ಔದ್ಯೋಗಿಕ ಶಿಕ್ಷಣಾಲಯಗಳು ಮುಂತಾದವನ್ನು ತೆರೆದರು. ಅನ್ನದಾನ, ವಿದ್ಯಾದಾನ, ಜ್ಞಾನದಾನಗಳ ಕಡೆಗೆ ಮನಸ್ಸು ನೀಡಿದರು. "ಜಗತ್ತಿನ ಉದ್ಧಾರಕ್ಕೆ ಯತ್ನಿಸಬೇಡಿ, ಜಗತ್ತು ಉದ್ಧಾರವಾಗುವುದಕ್ಕೆ ನಿಮಗಾಗಿ ಕಾಯುತ್ತಿಲ್ಲ. ನಿಮ್ಮ ಉದ್ಧಾರಕ್ಕಾಗಿ ಇನ್ನೊಬ್ಬರಿಗೆ ಸಹಾಯಮಾಡಿ" ಎಂದು ಉಪದೇಶಿಸಿದರು.

ವಿವೇಕಾನಂದರ ಜೀವನಧ್ಯೇಯ 'ವ್ಯಕ್ತಿಯನ್ನು ಮಾನವನನ್ನಾಗಿ ಮಾಡುವುದು ಎನ್ನುತ್ತಿದ್ದರು. ಅದಕ್ಕಾಗಿ ಯೋಗ್ಯ ಶಿಕ್ಷಣದ ಸೂತ್ರಗಳನ್ನು ಸೂಚಿಸಿದ್ದರು. "ಶಿಕ್ಷಣವೆಂದರೆ ಕೇವಲ ಮಾಹಿತಿ ಸಂಗ್ರಹಣೆಯಲ್ಲ, ಪಡೆದುಕೊಳ್ಳುವ ಜ್ಞಾನ ಅರ್ಥಪೂರ್ಣವಾಗಿದ್ದು ಮಾನವೀಯ ಮೌಲ್ಯಗಳನ್ನು ಕಲಿಸುವಂತಿರಬೇಕು" ಎಂದು ಹೇಳುತ್ತಿದ್ದರು. ಇಂದಿನ ಯುವಜನಾಂಗ ಸುತ್ತಲಿನ ಪ್ರಾಪಂಚಿಕ ಚಟುವಟಿಕೆಗಳಲ್ಲಿಯೇ ತೊಡಗಿ ತಮ್ಮನ್ನು ತಾವು ಕಳೆದುಕೊಂಡು ಸದಾಕಾಲ ಒತ್ತಡದ ಜೀವನವನ್ನು ನಡೆಸುವಂತಾಗಿದೆ. ಯಾಂತ್ರಿಕವಾದ, ವೇಗದ ಜೀವನಶೈಲಿಗೆ ತಮ್ಮನ್ನು ಒಪ್ಪಿಸಿಕೊಂಡು ಜೀವನ ಸೌಂದರ್ಯವನ್ನಾಗಲೀ, ಬದುಕಿನ ನಿಜವಾದ ಸ್ವಾರಸ್ಯವನ್ನಾಗಲೀ, ತಿಳಿದುಕೊಳ್ಳುವ ವ್ಯವಧಾನವಿಲ್ಲದಿರುವುದು ಒಂದು ಕಡೆಗಾದರೆ, ದೇಶದ ಜವಾಬ್ದಾರಿಯುತ ಪ್ರಜೆಯಾಗಿ ದೇಶಕ್ಕೆ ತಾನು ಸಲ್ಲಿಸಬೇಕಾದ ಕರ್ತವ್ಯಗಳ ಬಗೆಗೆ ಚಿಂತಿಸಲೂ, ಗಮನ ನೀಡಲೂ ಬಿಡುವಿಲ್ಲದಂತಾಗಿದೆ. ಬದುಕಿನ ಹಲವು ಆಯಾಮಗಳನ್ನು ಕುರಿತು ವಿವೇಚಿಸುತ್ತ, ಸಾಧ್ಯವಾದಷ್ಟೂ ತೆರೆದುಕೊಳ್ಳುತ್ತಾ ಕ್ರಿಯಾಶೀಲವಾಗಿರುವುದು ಹೇಗೆಂಬುದನ್ನು ತಿಳಿದುಕೊಳ್ಳುವ ಅಗತ್ಯವಿದೆ. ಅದಕ್ಕೆ ಬೇಕು ಆತ್ಮವಿಶ್ವಾಸ ಮತ್ತು ಜೀವನೋತ್ಸಾಹ ಹಾಗೂ ಆದರ್ಶಪ್ರಾಯರಾದವರು ಬದುಕನ್ನು ಸವೆಸಿದ ಹಾದಿ ವೀಕ್ಷಣೆ.

ಸಾಧನೆಯ ಮಾರ್ಗದಲ್ಲಿ ಕಾಣಬಹುದಾದ ಪ್ರಾರಂಭಿಕ ಸೋಲನ್ನು ಸಕಾರಾತ್ಮಕವಾಗಿ ಸ್ವೀಕರಿಸಿ ಮುಂದೆ ಸಾಗುವುದು ಅವಶ್ಯ. ಆದರೆ ಇಂದಿನ ಬಹುತೇಕ ಯುವಜನತೆಯಲ್ಲಿ ಸೋಲನ್ನು ಹೀಗೆ ಒಪ್ಪಿಕೊಳ್ಳಲಾಗದ ದೌರ್ಬಲ್ಯವನ್ನು ಕಾಣುತ್ತಿದ್ದೇವೆ. ಅವರಿಗೆ ಬೇಕಾಗಿದೆ ಸೂಕ್ತ ಮಾರ್ಗದರ್ಶನ, ಜೀವನವನ್ನು ಎದುರಿಸುವ ಧೈರ್ಯವನ್ನು ಅವರಲ್ಲಿ ತುಂಬಬೇಕಾಗಿದೆ, ಮಾನವೀಯ ಮೌಲ್ಯಗಳೊಂದಿಗೆ ರಾಷ್ಟ್ರೀಯತೆಯ ಅರಿವನ್ನು ಕೂಡ ಮೂಡಿಸಬೇಕಾಗಿದೆ, ಅಂತಹ ಶಿಕ್ಷಣಬೇಕಾಗಿದೆ.

ವಿದೇಶೀ ಜೀವನದ, ಅಲ್ಲಿನ ಸೌಲಭ್ಯಗಳ ಆಕರ್ಷಣೆಗಳಿಗೆ ಮಾರು ಹೋಗುವ ಯುವಜನತೆಗೆ ಸ್ವದೇಶದ ಹಿರಿಮೆಯ ಅರಿವು ಮೂಡಿಸಬೇಕಾಗಿದೆ. ಅಂದು ವಿವೇಕಾನಂದರು ಮನಸ್ಸು ಮಾಡಿದ್ದರೆ, ಅವರಿಗೆ ಸಿಕ್ಕಿದ್ದ ಜಾಗತಿಕ ಪ್ರಸಿದ್ಧಿಯ ಬಲದಿಂದ ಯಾವ ದೇಶದಲ್ಲಿಯಾದರೂ ನೆಲೆಸಿ ವೈಭವದ ಅಥವಾ ಐಷಾರಾಮದ ಜೀವನ ನಡೆಸಬಹುದಿತ್ತು. ಆದರೆ, ಅವರ ಎದೆಯಲ್ಲಿ ಪ್ರಜ್ವಲಿಸುತ್ತಿತ್ತು ದೇಶಪ್ರೇಮದ, ಸ್ವಾಭಿಮಾನದ ಕಿಡಿ. ಅವರ ಗಮನವಿದ್ದುದು ತಮ್ಮ ನೆಲದಲ್ಲಿ ಭಾರತಮಾತೆಯ ಪುತ್ರರ ದೀನಸ್ಥಿತಿಯನ್ನು ಹೋಗಲಾಡಿಸುವತ್ತ. ತಮ್ಮ ಆ ಗುರಿ ಸಾಧನೆಗೆ ಕೈಜೋಡಿಸಲು ಅವರು ಕರೆ ನೀಡಿದ್ದರು. ಪ್ರತಿವ್ಯಕ್ತಿ ತನ್ನ ಚಾರಿತ್ರ್ಯವನ್ನು ಉತ್ತಮವಾಗಿ ಬೆಳೆಸಿಕೊಂಡು ಶಿಕ್ಷಿಸಿಕೊಳ್ಳಬೇಕೆಂದಿದ್ದರು. ಧೈರ್ಯ, ತನ್ನಲ್ಲಿ ವಿಶ್ವಾಸ, ಸಹನೆ, ಕಾರ್ಯನಿರ್ವಹಣೆಯಲ್ಲಿ ಸ್ಥಿರತೆ ಎಲ್ಲವೂ ಯಶಸ್ಸಿನ ದಾರಿಗೆ ಕೊಂಡೊಯ್ಯುತ್ತವೆಂದು ತಿಳಿಸಿದ್ದರು. ಪ್ರತಿಯೊಬ್ಬರೂ ಯಶಸ್ವೀ ಜೀವನ ನಡೆಸಲು ಅವರು ಹೇಳಿದ ಬದುಕಿನ ಹದಿನೈದು ನಿಯಮಗಳು ಇಂದಿಗೆ ಮಾತ್ರವಲ್ಲ ಎಂದೆಂದಿಗೂ ಪ್ರಸ್ತುತವೆನಿಸುತ್ತವೆ. ಅವು "ಪ್ರೀತಿಯೆಂಬುದು ಬದುಕಿನ ನಿಯಮ ; ಜಗತ್ತು ನೀನು ನೋಡುವ ದೃಷ್ಟಿಯನ್ನು ಅವಲಂಬಿಸಿದೆ; ಬದುಕು ಸುಂದರವಾದುದು; ಅದು ನೀನು ಭಾವಿಸುವಂತಿರುತ್ತದೆ; ನಿನ್ನನ್ನು ನೀನು ಮುಕ್ತವಾಗಿಟ್ಟುಕೊ; ದೂಷಣೆಯ ಪಂದ್ಯವನ್ನಾಡಬೇಡ; ಇತರರಿಗೆ ನೆರವಾಗು; ನಿನ್ನ ಆದರ್ಶಗಳನ್ನು ಎತ್ತಿಹಿಡಿ; ಅಂತರಾತ್ಮದ ದನಿಗೆ ಕಿವಿಗೊಡು; ನಿನ್ನತನವನ್ನುಳಿಸಿಕೊ; ಯಾವ ಕಾರ್ಯವೂ ಅಸಾಧ್ಯವಲ್ಲ; ನಿನ್ನಲ್ಲಿ ಸಾಮರ್ಥ್ಯವಿದೆ; ಪ್ರತಿದಿನವೂ ಕಲಿ; ಪ್ರಾಮಾಣಿಕವಾಗಿರು; ಭಿನ್ನರೀತಿಯಲ್ಲಿ ಚಿಂತನೆ ಮಾಡು"– ಇವೆಲ್ಲ ವ್ಯಕ್ತಿತ್ವ ನಿರ್ಮಾಣದ ಸೂತ್ರಗಳೆನ್ನಬಹುದು. ಇದೇ ಅವರ ಮಾತಿನಲ್ಲಿ "ಮ್ಯಾನ್ ಮೇಕಿಂಗ್ ಈಸ್ ಮೈ ಮಿಷನ್". ಈ ಕಾರ್ಯ ನಿರಂತರವಾಗಿ ಆಗಬೇಕು.

ನಂ. ನಾಗಲಕ್ಷ್ಮಿ, ನಿವೃತ್ತ ಉಪನ್ಯಾಸಕರು, ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-01-2017 Date of Posting 20th or 21st of every month

# ಚಿತ್ರ ಸುದ್ದಿಗಳು




**2016 ರ ಡಿಸೆಂಬರ್ 17 ಮತ್ತು 18 ರಂದು ವಡೋದರಾದಲ್ಲಿ ನಡೆದ ಅಖಿಲ ಭಾರತೀಯ ಮಹಿಳಾ ಕಾರ್ಯಕರ್ತೆಯರ ವರ್ಗದಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳು.**



One day Workshop for Maths-Science Teachers and High school Head Masters of Belagavi dist. arranged by Karnataka Rajya Madhyamik Shikshak Sangh, Belagavi and DDPI office Belagavi on 03-01-2017

**IF UNDELIVERED PLEASE RETURN TO SENDER**

**Published for K.S.S.T.A. by K. Narahari**
**# 55, Yadavasmruthi, 1st Main, Sheshadripuram**
**Bangalore-560020. ✆ : 080-23466495**
**Printed at : RASHTROTTHANA MUDRANALAYA**
**Bangalore - 560 019.**

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com